# ಅಮೃತವಾಣಿ

(ವ್ಯಾಖ್ಯಾನ)

ರಚನಾಕಾರರು

## ಶ್ರೀ ಸ್ವಾಮಿ ಸತ್ಯಾನಂದ್‌ಜೀ ಮಹಾರಾಜ್

ವಾಚನಕಾರರು

## ಡಾ । ವಿಶ್ವಮಿತ್ರ

© ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ.

ಪ್ರಕಾಶಕರು

**ಶ್ರೀ ಸ್ವಾಮೀ ಸತ್ಯಾನಂದ್ ಧರ್ಮಾರ್ಥ್ ಟ್ರಸ್ಟ್**

8, ರಿಂಗ್ ರೋಡ್, ಲಾಜ್‌ಪತ್ ನಗರ್ – 4

ಹೊಸ ದಿಲ್ಲಿ – 110 024

1999

ಮುದ್ರಕರು

**ಬ್ರಿಲಿಯಂಟ್ ಪ್ರಿಂಟರ್ಸ್ ಪ್ರೈ. ಲಿ.**

ಬೆಂಗಳೂರು–560 054

ದೂರವಾಣಿ: 3366547, 3317541

# ಅಮೃತವಾಣಿ

ಯಾವ ವಚನ ಶಬ್ಧಗಳು ಅಮೃತವಾಗಿವೆಯೋ,
ಯಾವ ವಾಣಿ ಅಮೃತ ಪ್ರಧಾನ ಮಾಡುತ್ತದೆಯೋ,
ಯಾವುದು ಅಮರತ್ವವನ್ನು ನೀಡುತ್ತದೆಯೋ,
ಅಂತಹಾ ವಾಣಿಯನ್ನು ನುಡಿಯುವುದರಿಂದ,
ಹಾಡುವುದರಿಂದ ವ್ಯಕ್ತಿ ಅಮರನಾಗುತ್ತಾನೆ,
ಅದೇ ಅಮೃತವಾಣಿ.



Shree Ram Sharnam, International Spiritual Centre, 8A, Ring Road, Lajpat Nagar - IV, New Delhi - 110 024, INDIA www.shreeramsharnam.org

# ಸರ್ವಶಕ್ತಿಮತೆ ಪರಮಾತ್ಮನೆ
# ಶ್ರೀರಾಮಾಯ ನಮಃ

ಸರ್ವ ಶಕ್ತಿಗಳಿಂದ ಸಂಪನ್ನನಾದ ಪರಮಾತ್ಮ ಶ್ರೀರಾಮನಿಗೆ ನಮಸ್ಕಾರಗಳು.

ಪರಮಾತ್ಮನೇ ಶ್ರೀರಾಮ. ಯಾವೆಲ್ಲ ಶಕ್ತಿಗಳಿಂದ ಯುಕ್ತನಾಗಿದ್ದಾನೆಯೋ ಅರ್ಥಾತ್ ಯಾರಲ್ಲಿ ಸಮೂಚೀ ಶಕ್ತಿಗಳು ವಿದ್ಯಮಾನವಾಗಿವೆಯೋ, ಯಾರು ಸಮಸ್ತ ಶಕ್ತಿಗಳಿಗೆ ಸ್ವಾಮಿಯಾಗಿದ್ದಾನೆಯೋ, ಅಂಥವನಿಗೆ ನಮಸ್ಕಾರಗಳು.

ಸರ್ವಶಕ್ತಿಮಾನ ಪರಮಾತ್ಮನ ಸಮ್ಮುಖದಲ್ಲಿ ನಾನು ಬಾಗುತ್ತೇನೆ. ಅಂದರೆ ನಾನವನಿಗೆ ಶರಣಾಗತನಾಗುತ್ತೇನೆ. ನಾನು ಅವನಿಗೆ ಸಮರ್ಪಿತ.

ಪರಮಾತ್ಮ : ಸರ್ವೋತ್ಕೃಷ್ಟ ಆತ್ಮ (The Supreme Soul)
ಶ್ರೀ : ಶ್ರೀಮಾನ್
ಶ್ರೀ : ಶೋಭಾ, ಯಶ, ಐಶ್ವರ್ಯ,
ವಿಜಯ, ಸೌಭಾಗ್ಯ, ವೈಭವ, ತೇಜ, ಲಕ್ಷ್ಮೀ.

# ರಾಮ ಕೃಪಾ ಅವತರಣ
## (Descent of Ram's Grace)

### ರಾಮನ ಕೃಪೆಯ ಮಹಿಮೆ

ಶ್ರೀರಾಮ ಕೃಪೆ ಅವತರಿಸುವುದು.
ಭಕ್ತನ ಮೇಲೆ ಶ್ರೀರಾಮ ಕೃಪೆಯಾಗುವುದು.
ಪ್ರಭು ರಾಮನಿಂದ ಕೃಪೆ ಒದಗಿ ಬರುವುದು.
ಶ್ರೀರಾಮ ಕೃಪೆಯ ಉದಯವಾಗುವುದು.

ಕೃಪಾ : ಅನುಗ್ರಹ.

**ಪರಮ್ ಕೃಪಾ ಸುರೂಪ್ ಹೈ ಪರಮ್ ಪ್ರಭು ಶ್ರೀರಾಮ್**
**ಜನ್ ಪಾವನ್ ಪರಮಾತ್ಮ ಪರಮ್ ಪುರುಷ್ ಸುಖ್‌ಧಾಮ್** ॥ 1 ॥

ಸರ್ವೋತ್ಕೃಷ್ಟನಾದ ಪ್ರಭು ಶ್ರೀರಾಮನಿಗೆ ಸುಂದರವಾದ ರೂಪವಿದೆ. ಆತ ಶ್ರೇಷ್ಠತಮ ಕೃಪಾಸ್ವರೂಪಿಯಾಗಿದ್ದಾನೆ. ಕೃಪೆಯೇ ಆತನ ರೂಪವಾಗಿದ್ದು ಜನರನ್ನು ಪವಿತ್ರಗೊಳಿಸುವ ಪರಮಾತ್ಮನಾಗಿದ್ದಾನೆ, ಪುರುಷೋತ್ತಮನಾಗಿದ್ದಾನೆ.

ಸರ್ವೋಪರಿ: ಸರ್ವಶ್ರೇಷ್ಠ ಸರ್ವೋತ್ತಮ ಪುರುಷನಾಗಿದ್ದಾನೆ ತಥಾ ಸುಖದ ನಿವಾಸಸ್ಥಾನವಾಗಿದ್ದಾನೆ.

ಪರಮ : Supreme

**ಸುಖ್ ಹೈ ಶುಭಾ ಕೃಪಾ, ಶಕ್ತಿ ಶಾಂತಿ ಸ್ವರೂಪ್**
**ಹೈ ಜ್ಞಾನ್ ಆನಂದಮಯಿ ರಾಮ್‌ಕೃಪಾ ಅನೂಪ್ ॥ 2 ॥**

ಪರಮ ಕೃಪೆ ಪ್ರಭು ರಾಮನ ರೂಪವಾಗಿದೆ. ಸುಖ, ಮಂಗಳ ಹರ್ಷ, ಹಿತ, ಸೌಭಾಗ್ಯಗಳನ್ನು ಪ್ರಧಾನ ಮಾಡುವುದು ಆತನ ಸ್ವರೂಪವಾಗಿದೆ. (ಆಂತರಿಕ ಸ್ವಭಾವ) ಆತ ಜ್ಞಾನ ಹಾಗೂ ಆನಂದದ ಆಗರವಾಗಿದ್ದಾನೆ, ಶಕ್ತಿಸಾಮರ್ಥ್ಯ, ಶಾಂತಿಗಳ ಮಹಾ ಪೂರಕನಾಗಿದ್ದಾನೆ. ರಾಮಕೃಪೆ ಸುಖದಾಯಕವಾಗಿದ್ದು ಮಂಗಳವನ್ನುಂಟು ಮಾಡುವುದಾಗಿದೆ. ಶಕ್ತಿ ಮತ್ತು ಶಾಂತಿ ಆತನ ನಿಜರೂಪವಾಗಿದ್ದು ಆನಂದ ಜ್ಞಾನಗಳು ಆತನ ಸ್ವರೂಪವಾಗಿವೆ; ಆತನು ಅನುಪಮನಾಗಿದ್ದಾನೆ.

ರೂಪ ಸ್ವರೂಪ ಆಭೂಷಣಗಳಿಗೆ ರೂಢವಿದೆ, ಸರ, ಬಳೆ ಕುಂಡಲ, ಉಂಗುರ, ಇತ್ಯಾದಿ. ಆದರೆ ಅದರ ಸ್ವರೂಪ ಸ್ವರ್ಣಬಂಗಾರ, ಕಲ್ಲುಸಕ್ಕರೆ ಚಪ್ಪಟೆಯಾಗಿದ್ದು ಗಟ್ಟಿಯಾಗಿ ಹರಳಿನಾಕಾರದಲ್ಲಿರುವುದು. ಇದು ಕಲ್ಲುಸಕ್ಕರೆಯಲ್ಲಿ ಕಂಡು ಬರುವ ಬಾಹ್ಯರೂಪವಾಗಿದೆ. ಆದರೆ ಸಿಹಿ ಕಲ್ಲುಸಕ್ಕರೆಯ ಸ್ವರೂಪವಾಗಿದೆ. ಪ್ರತಿಯೊಂದು ವಿಧದ ಕಲ್ಲುಸಕ್ಕರೆಯೂ ಸಿಹಿಯಾಗಿಯೇ ಇರುವುದು.

**ಪರಮ್ ಪುಣ್ಯ ಪ್ರತೀಕ್ ಹೈ ಪರಮ್ ಈಶಾ ಕಾ ನಾಮ್**
**ತಾರಕ್ ಮಂತ್ರ, ಶಕ್ತಿ ಘರ್, ಬೀಜಾಕ್ಷರ್ ಹೈ ರಾಮ್ ॥ 3 ॥**

ಪರಮೇಶ್ವರ, ಸ್ವಾಮಿ, ಉಚ್ಚತಮ ಶಾಸಕ ಅರ್ಥಾತ್ ಭಗವಂತನ ನಾಮ ಪರಮ ಪವಿತ್ರತೆಯ ದ್ಯೋತಕವಾಗಿದೆ, ಸಂಕೇತವಾಗಿದೆ. ರಾಮ

ನಾಮ ಶಕ್ತಿಯು ಆಗರವಾಗಿದ್ದು ಸಂಸಾರ ಸಾಗರವನ್ನು ದಾಟಿಸುವಂಥದ್ದಾಗಿದೆ. ಉದ್ಧಾರ ಮಾಡುವಂಥದ್ದಾಗಿದೆ, ಮೋಕ್ಷದಾಯಕವಾಗಿದೆ.

**ಮಂತ್ರ :** ಸಿದ್ದಗೊಳಿಸಿದ ಶಬ್ದಾ ಸಮೂಹ ಯಾವುದರ ಉಚ್ಚಾರಣೆಯು ನಮ್ಮನ್ನು ರಕ್ಷಿಸುತ್ತದೆಯೋ, ಯಾವುದು ಪಾಪ ವಿಮೋಚಕವಾಗಿದೆಯೋ, ಅದು ನಮ್ಮನ್ನು ಪಾವನಗೊಳಿಸಿ ಮುಕ್ತರನ್ನಾಗಿಸುವಂಥದ್ದು.

**ಬೀಜಾಕ್ಷರ :** 'ರ' ಅಗ್ನಿಬೀಜ; 'ಅ' ಸೂರ್ಯಬೀಜ; 'ಮ' ಚಂದ್ರ ಬೀಜ. ಇವು ಮೂರು ಸೇರಿ ಬೀಜಾಕ್ಷರ ರಾಮನಾಮ ( ರಾಮ ಶಬ್ದ ).

**ಸಾಧಕ್ ಸಾಧನ್ ಸಾಧಿಯೆ, ಸಮಜ್ ಸಕಲ್ ಶುಭ್ ಸಾರ್**
**ವಾಚಕ್ ವಾಚ್ಯ್ ಏಕ್ ಹೈ, ನಿಶ್ಚಿತ್ ಧಾರ್ ವಿಚಾರ್ ॥ 4 ॥**

ಎಲೈ ಸಾಧಕನೇ ! ರಾಮಮಂತ್ರವೆನ್ನುವುದು ಸಮೂಚಿ ಶಬ್ದಗಳ (ಒಳ್ಳೆತನ) ತತ್ವ (ಜೋಡಿಸಲ್ಪಟ್ಟ)ದ್ದೆಂದು ತಿಳಿದು, ಆಧ್ಯಾತ್ಮಿಕ ಸಾಧನೆಗಳನ್ನು ಅಭ್ಯಾಸ ಮಾಡು. ಆತನನ್ನು ವರ್ಣಿಸಲು ಬಳಸಲಾದ ಶಬ್ದ ಮತ್ತು ವಸ್ತುಗಳೆರಡೂ ಒಂದೇ ಎಂಬ ತತ್ವವನ್ನು ನಿಶ್ಚಿತ ರೂಪದಿಂದ ಧಾರಣೆ ಮಾಡು. ನಿನ್ನ ಹೃದಯದಲ್ಲಿ, ರಾಮ ಮತ್ತು ನಾಮ ವಾಚಕ ಹಾಗೂ ವಾಚ್ಯಗಳೆರಡೂ ಒಂದೇ ಎಂಬ ದೃಢ ನಂಬಿಕೆ ಇರಲಿ.

**ಮಂತ್ರಮಯ್ ಹಿ ಮಾನಿಯೆ, ಇಷ್ಟ್ ದೇವ್ ಭಗವಾನ್**
**ದೇವಾಲಯ್ ಹೈ ರಾಮ್ ಕಾ, ರಾಮ್ ಶಬ್ದ್ ಗುಣ ಖಾನ್ ॥5॥**

ನಮ್ಮ ಪೂಜ್ಯ ಆರಾಧ್ಯ ದೇವತೆ ಶ್ರೀರಾಮನು ಮಂತ್ರದಲ್ಲಿ ಆಸೀನನಾದವನೆಂದು, ವಿರಾಜಮಾನನಾಗಿರುವನೆಂದು ತಿಳಿಯಿರಿ. ರಾಮ ಶಬ್ದ

ವೆನ್ನುವುದು ಗುಣಗಳ ಗಣಿಯಾಗಿದೆ, ಸ್ತೋತ್ರವಾಗಿದೆ, ಭಂಡಾರವಾಗಿದೆ, ರಾಮನ ಮಂದಿರವಾಗಿದೆ, ನಿವಾಸಸ್ಥಾನವಾಗಿದೆ ಎಂಬುದನ್ನು ಅರಿಯಿರಿ.

**ರಾಮ್ ನಾಮ್ ಆರಾಧಿಯೆ ಭೀತರ್ ಭರ್ ಯೆ ಭಾವ್**
**ದೇವ್ ದಯಾ ಅವತರಣ್ ಕಾ, ಧಾರ್ ಚೌಗುನಾ ಚಾವ್ ॥ 6 ॥**

ಉದಾತ್ತ,ಉತ್ತಮಗುಣಗಳಿಂದ ಮನಸ್ಸನ್ನು ತುಂಬಿಸಿ, ಶ್ರೀ ರಾಮನ ಕೃಪೆಯನ್ನು ಹೊಂದುವ ಪ್ರಬಲವಾದ ಇಚ್ಛೆ ಹಾಗೂ ಉತ್ಸಾಹವನ್ನು ಹೊಂದಿದವರಾಗಿ, ಕಾತುರರಾಗಿ, ರಾಮನಾಮದ ಗುಣ ಹಾಗೂ ಅರ್ಥಗಳನ್ನು ಚಿಂತಿಸಿ, ರಾಮನಾಮದ ಬಗೆಗಿನ ಚಿಂತನೆಯಲ್ಲಿ ತೊಡಗಿರಿ.

**ಮಂತ್ರ ಧಾರಣಾ ಯೋಂ ಕರ್, ವಿಧಿ ಸೇ ಲೇ ಕರ್ ನಾಮ್**
**ಜಪಿಯೆ ನಿಶ್ಚಯ್ ಅಚಲ್ ಸೆ, ಶಕ್ತಿ ಧಾಮ್ ಶ್ರೀ ರಾಮ್ ॥ 7 ॥**

ವಿಧಿಪೂರ್ವಕವಾಗಿ ರಾಮನಾಮದ ದೀಕ್ಷೆಯನ್ನು ಪಡೆದು, ರಾಮ ಮಂತ್ರವನ್ನು ಈ ಪ್ರಕಾರವಾಗಿ ಗ್ರಹಿಸಿ ಧಾರಣೆ ಮಾಡಿರಿ. ದೃಢ ಸಂಕಲ್ಪ ಪೂರ್ವಕವಾಗಿ ನಿಮ್ಮ ಮನಸ್ಸನ್ನು ಮಂತ್ರದ ಮೇಲೆ ನೆಟ್ಟು, ಶಕ್ತಿಯ ನೆಲೆಯಂತಿರುವ ಶ್ರೀ ರಾಮನಾಮವನ್ನು ಪುನಃ ಪುನಃ ಉಚ್ಚರಿಸಿರಿ (ಜಪಿಸಿರಿ).

**ಮಂತ್ರಧಾರಣಾ :** ಮನಸ್ಸನ್ನು ಕೇವಲ ಮಂತ್ರದ ಮೇಲೆ ನೆಡುವುದಕ್ಕೆ ಮಂತ್ರಧಾರಣವೆಂದು ಹೆಸರು.

**ಜಪ :** ರಾಮನಾಮದ ಅರ್ಥವನ್ನು ಚಿಂತಿಸುತ್ತಾ ಅದನ್ನೆ ಪುನಃ ಪುನಃ ಉಚ್ಚರಿಸುವುದು.

11

**ಯಥಾ ವೃಕ್ಷ್ ಭೀ ಬೀಜ್ ಸೆ, ಜಲ್‌ರಜ್ ಋತು ಸಂಯೋಗ್**
**ಪಾ ಕರ್ ವಿಕ್‌ಸೆ ಕ್ರಮ್ ಸೆ, ತ್ಯೋಂ ಮಂತ್ರ್ ಸೆ ಯೋಗ್ ॥ 8 ॥**

ಯಾವ ರೀತಿ ವೃಕ್ಷವು ಬೀಜ, ನೀರು, ಮಣ್ಣು ಹಾಗೂ ಅನುಕೂಲಕರ ಋತು ಮಾನಗಳಿಂದ ಕ್ರಮೇಣ ಬೆಳೆಯುವುದೋ, ಅದೇ ಪ್ರಕಾರ ಮಂತ್ರ, ಜಪಗಳಿಂದ ನಿರಂತರವಾಗಿ ಆಧ್ಯಾತ್ಮಿಕ ಪ್ರಗತಿಯುಂಟಾಗುತ್ತದೆ.

**ಮಂತ್ರಯೋಗ :** ಮಂತ್ರದ ಸಾಧನೆಯಿಂದ ಭಗವಾನ್ ಮಿಲನ ವಾಗುವಂತಹ ಪದ್ಧತಿ.

ಧಾರಣ, ಧ್ಯಾನ, ಹಾಗೂ ಸಮಾಧಿ ಇವು ಮೂರು ಮಂತ್ರದೊಂದಿಗೆ ಬೆಸೆಯಲ್ಪಡುವುದೇ ಮಂತ್ರಯೋಗವೆಂದೆನಿಸುತ್ತದೆ. ನಾಮದ ಜಪ ಮಾಡುವುದು, ಅದರ ಅರ್ಥದ ಬಗ್ಗೆ ಚಿಂತನೆಯನ್ನು ಮಾಡಿ ಲೀನ ವಾಗುವುದು, ಮಂತ್ರಯೋಗದ ವಿಧಾನವಾಗಿದೆ.

**ಯಥಾ ಶಕ್ತಿ ಪರಮಾಣು ಮೆ, ವಿದ್ಯುತ್ ಕೋಶ್ ಸಮಾನ್**
**ಹೈ ಮಂತ್ರ್ ತ್ಯೋಂ ಶಕ್ತಿಮಯ್, ಐಸಾ ರಖಿಯೆ ಧ್ಯಾನ್ ॥ 9 ॥**

ಪರಮಾಣು ಶಕ್ತಿಯ ಆಗರವಾಗಿರುವಂತೆ, ವಿದ್ಯುತ್ ಕೋಶಗಳ ಭಂಡಾರವು ವಿದ್ಯುದಾಗರವಾಗಿದೆ. ಅದೇ ರೀತಿ ಮಂತ್ರಗಳು ಕೂಡಾ ಶಕ್ತಿಕೋಶವಾಗಿರುವುದೆಂಬುದನ್ನು ನಂಬಿ ಧ್ಯಾನಿಸಿ ಈ ಮಂತ್ರಗಳಲ್ಲಿ ಪಾಪ ತಾಪಗಳನ್ನು ಸಂಹರಿಸುವ ಹಾಗೂ ಸತ್ಭಾವನೆಗಳನ್ನು ವಿಕಸಿಸುವ ಶಕ್ತಿ ಇದೆ.

**ಧ್ರುವಧಾರಣ್ ಧಾರ್ ಯಹ್ ರಾಧಿಯೇ ಮಂತ್ರ್ ವಿಧಾನ್**
**ಹರಿಕೃಪಾ ಅವತರಣ್ ಕಾ ಪೂರ್ಣ್ ರಖಿಯೆ ಜ್ಞಾನ್ ॥ 10 ॥**

ಇಂತಹ ದೃಢ ವಿಶ್ವಾಸವನ್ನು ಹೊಂದಿ, ಮಂತ್ರನಿಧಿಯಂತಿರುವ ಶ್ರೀ ರಾಮ ಮಂತ್ರವನ್ನು ಧ್ಯಾನಿಸು. ಈ ರೀತಿ ಮಾಡುವುದರಿಂದಲೇ ಹರಿಕೃಪೆ ಒದಗುವುದೆಂಬುದನ್ನು ಸಂಪೂರ್ಣವಾಗಿ ನಂಬಿ.

**ಧ್ರುವಧಾರಣಾ :** ಮಂತ್ರದಲ್ಲಿ ಮನಸ್ಸನ್ನು ದೃಢವಾಗಿ ಕೇಂದ್ರೀಕರಿಸುವುದು.

**ಮಂತ್ರ ವಿಧಾನ:** ಮಂತ್ರಗಳ ಭಂಡಾರ, ಬೀಜಾಕ್ಷರ.

**ಆತಾ ಖಿಡ್‌ಕೀ ದ್ವಾರ್ ಸೆ ಪವನ್ ತೇಜ್ ಕಾ ಪೂರ್**
**ಹೈ ಕೃಪಾ ತ್ಯೋಂ ಆ ರಹಿ ಕರ್‌ತಿ ದುರ್ಗುಣ್ ದೂರ್ ॥ 11 ॥**

ಕಿಟಕಿ ಬಾಗಿಲುಗಳನ್ನು ತೆರೆದಿಟ್ಟಾಗ, ಪೂರ್ತಿಯಾಗಿ ದುರ್ಗಂಧ ಹೊರ ಹೊರಟು ಹೋಗಿ, ಉತ್ತಮ ಗಾಳಿ ಮತ್ತು ಬೆಳಕು ಪ್ರವೇಶಿಸುವಂತೆ ಶ್ರೀರಾಮ ಕೃಪೆಯುಂಟಾದಾಗ ಎಲ್ಲ ದುರ್ಗುಣಗಳೂ ದೂರವಾಗಿ ಸದ್ಗುಣಗಳು ತುಂಬಿ ಬಿಡುತ್ತವೆ.

**ಬಟನ್ ದಬಾನೇ ಸೇ ಯಥಾ ಆತಿ ಬಿಜಲಿ ಧಾರ್**
**ನಾಮ್ ಜಾಪ್ ಪ್ರಭಾವ್ ಸೆ ಯೋ ಕೃಪಾ ಅವತಾರ್ ॥ 12 ॥**

ಯಾವ ರೀತಿ ಗುಂಡಿ ಒತ್ತಿದಾಗ ವಿದ್ಯುತ್ ಸಂಚಾರ ಪ್ರವರ್ತಿಸುತ್ತದೆಯೋ, ಅದೇ ರೀತಿ ಶ್ರೀರಾಮನಾಮದ ಸ್ಮರಣೆಯಿಂದ ಹರಿಕೃಪೆಯುಂಟಾಗುತ್ತದೆ.

**ಖೋಲ್‌ತೇ ಹಿ ಜಲ್ ನಲ್ ಜ್ಯೋಂ ಬಹತ್ ವಾರಿ ಬಹಾವ್**
**ಜಪ್‌ಸೆ ಕೃಪಾ ಅವತರಿತ್ ಹೊ ತಥಾ ಸಜಗ್ ಕರ್ ಭಾವ್ ॥ 13 ॥**

13

ನೀರಿನ ಕೊಳಾಯಿಯನ್ನು ತಿರುಗಿಸಿದಾಗ, ನೀರಿನ ಧಾರೆ ಹರಿಯಲಾರಂಭಿಸುವಂತೆ ರಾಮನಾಮವನ್ನು ಜಪಿಸುವುದರಿಂದ ದೇವಕೃಪೆಯುಂಟಾಗುತ್ತದೆ. ಇದಿಷ್ಟೇ ಅಲ್ಲ, ನಮ್ಮಲ್ಲಿ ಸದ್ಭಾವನೆಗಳು ಜಾಗೃತಗೊಂಡು ನಮ್ಮ ನಂಬಿಕೆಗಳು ದೃಢವಾಗುವುವು.

**ರಾಮ್ ಶಬ್ದ್ ಕೊ ಧ್ಯಾಯಿಯೆ, ಮಂತ್ರ್ ತಾರಕ್ ಮಾನ್**
**ಸ್ವಶಕ್ತಿ ಸತ್ತಾ ಜಗ್ ಕರೆ, ಉಪರಿ ಚಕ್ರ್ ಕೊ ಯಾನ್ ॥ 14 ॥**

ಶ್ರೀ ರಾಮಮಂತ್ರವನ್ನು ಉದ್ಧಾರಕ, ಮುಕ್ತಿದಾತಾ ಎಂದು ನಂಬಿ, ರಾಮಮಂತ್ರದ ಮೇಲೆ ಮನಸ್ಸನ್ನು ನೆಟ್ಟು, ಧ್ಯಾನಿಸುವುದರಿಂದ ಆತ್ಮಶಕ್ತಿ; ಸ್ವಂತಿಕೆಯ ಭಾವನೆಗಳು ಜಾಗೃತಗೊಂಡು ಮೇಲಿನ ಚಕ್ರದೆಡೆಗೆ ನಾವು ಸಾಗುವೆವು.

***ಚಕ್ರ*** : ಯೋಗದ ಪ್ರಕಾರ ಶರೀರದಲ್ಲಿ 8 ಪ್ರಕಾರದ ಚಕ್ರಗಳಿವೆ. ಮೂಲಾಧಾರ, ಸ್ವಾಧಿಷ್ಠಾನ್, ಮಣಿಪೂರ (ನಾಭಿಚಕ್ರ), ಅನಾಹತ (ಹೃದಯ), ವಿಶುದ್ಧ (ಕಂಠ), ಆಜ್ಞಾ (ತ್ರಿಕೂಟ), ಬಿಂದು (ಗ್ರೀವ), ತಥಾ ಸಹಸ್ರಾರ (ಶಿರ).

***ಉಪರಿಚಕ್ರ*** : ಆಜ್ಞಾ ಬಿಂದು ತಥಾ ಸಹಸ್ರಾರ.

**ದಶಮ್ ದ್ವಾರ್ ಸೆ ಹೋ ತಭಿ ರಾಮ್ ಕೃಪಾ ಅವತಾರ್**
**ಜ್ಞಾನ್ ಶಕ್ತಿ ಆನಂದ್ ಸೆ, ಸಾಮ್ ಶಕ್ತಿ ಸಂಚಾರ್ ॥ 15 ॥**

ಆಗ ಹತ್ತನೆಯ ದ್ವಾರದ ಮೂಲಕ ರಾಮ ಕೃಪೆಯು ಪ್ರವೇಶಿಸುವುದು. ಇದರಿಂದ ಆತ್ಮಬೋಧೆ, ಪ್ರಬದ್ಧತೆ, ಬಲ, ಆನಂದದ ಜೊತೆ

ಮನಸ್ಸನ್ನು ಸ್ಥಿರ ಹಾಗೂ ಶಾಂತಗೊಳಿಸುವ ಎಲ್ಲ ಶಕ್ತಿಗಳೂ ವಿಸ್ತಾರವಾಗಿ ಸಂಚರಿಸಲಾರಂಭಿಸುವುವು.

**ದಶಮದ್ವಾರ :** ಮಾನವ ದೇಹವನ್ನು ನವದ್ವಾರದ ನಗರಿಯೆಂದು ಕರೆಯಲಾಗುತ್ತದೆ. ಎರಡು ಕಣ್ಣುಗಳು, ಎರಡು ಕಿವಿಗಳು, ಮೂಗಿನ ಎರಡು ಹೊಳ್ಳೆಗಳು, ಒಂದು ಬಾಯಿ ಮತ್ತು ಮಲಮೂತ್ರ ವಿಸರ್ಜಿಸುವ ಎರಡು ಅಂಗಗಳು ಒಂಭತ್ತು ದ್ವಾರಗಳಾಗಿವೆ. ಹತ್ತನೆಯ ದ್ವಾರ ಅದೃಶ್ಯವಾಗಿದೆ, ಅದು ನವದ್ವಾರಕ್ಕೂ ಮಿಗಿಲಾದುದಾಗಿದೆ.

**ದೇವ್ ದಯಾ ಸ್ವಶಕ್ತಿ ಕಾ ಸಹಸ್ರ ಕಮಲ್ ಮೆ ಮಿಲಾಪ್**
**ಹೋ ಸತ್ಪುರುಷ್ ಸಂಯೋಗ್ ಸೆ ಸರ್ವ್ ನಷ್ಟ್ ಹೋ ಪಾಪ್ ॥ 16 ॥**

ಸತ್ಪುರುಷರ ಸಾನಿಧ್ಯದಿಂದ, ಪರಮಾತ್ಮನ ದಯೆಯಿಂದ, ಕುಂಡಲಿನಿ ಶಕ್ತಿಯ ಸಹಸ್ರದಳಗಳ ಕಮಲಗಳು ಬ್ರಹ್ಮ ಧಾರೆಯಲ್ಲಿ ವಿಲೀನಗೊಳ್ಳು ವುವು. ಇದರಿಂದ ಸರ್ವ ಪಾಪಗಳು ನಷ್ಟವಾಗಿ ಬಿಡುವುವು.

ದೇವರ ಕೃಪೆಯಿಂದ ಸ್ವಶಕ್ತಿಯ ಸಾವಿರದಳಗಳ ಕಮಲವು ಸಾವಿರ ಕಮಲಗಳಲ್ಲಿ ಸೇರಿ ಹೋಗುವುದು. ಈ ರೀತಿಯ ಮಿಲನಕ್ಕೆ ಸತ್ಪುರುಷರ ಸಹಯೋಗ ಅಗತ್ಯ. ಇದರಿಂದ ಜೀವನದ ಎಲ್ಲ ದೋಷಗಳು ನಷ್ಟವಾಗುವುವು. ಪರಮ ಕಲ್ಯಾಣದ ಪ್ರಾಪ್ತಿಗಾಗಿ ಪರಮಾತ್ಮನ ದಯೆ, ಆತ್ಮಶಕ್ತಿ, ಹಾಗೂ ಸಂತರ ದಯೆ ಇವು ಮೂರೂ ಅತ್ಯವಶ್ಯಕ. ಅದನ್ನೇ ಶಬ್ದಗಳಿಂದ ಉಲ್ಲೇಖಿಸಲಾಗಿದೆ.

# ನಮಸ್ಕಾರ ಸಪ್ತಕ

## ನಮಸ್ಕಾರದ ಏಳು ಶ್ಲೋಕಗಳು

**ಕರತಾ ಹೂಂ ಮೈ ವಂದನಾ ನತ್ ಶಿರ್ ಬಾರಂಬಾರ್**
**ತುಝೆ ದೇವ್ ಪರಮಾತ್ಮನ್, ಮಂಗಲ್ ಶಿವ್ ಶುಭಕರ್** ॥ 1 ॥

ಮಂಗಳ, ಕಲ್ಯಾಣ ಹಾಗು ಶುಭವನ್ನುಂಟು ಮಾಡುವ ಪರಮಾತ್ಮನೇ, ತಮಗೆ ನಾನು ಶಿರವಬಾಗಿ ಪುನಃ ಪುನಃ ವಂದಿಸುವೆನು.

***ವಂದನಾ* :** ನಮಸ್ಕಾರ.

***ಮಂಗಳ* :** ಕಲ್ಯಾಣಕಾರಿ, ಸಮೃದ್ಧಿ ಉತ್ತರೋತ್ತರದಲ್ಲಿ ನಾವು ಯಾವ ಉನ್ನತಿಯ ಫಲವಾಗಿ ಮುನ್ನೆಡೆಯುವೆವೊ ಅದು (Benediction).

***ಶಿವ* :** ಸೌಭಾಗ್ಯ, ಶಾಂತ (Happiness, peace).

***ಶುಭ* :** ಶುಭ, ಶಕುನ, ಸ್ವಸ್ತಿ (Auspicious).

**ಅಂಜಲಿ ಪರ್ ಮಸ್ತಕ್ ಕಿಯೆ, ವಿನಯ್ ಭಕ್ತಿ ಕೇ ಸಾಥ್**
**ನಮಸ್ಕಾರ್ ಮೇರಾ ತುಝೆ ಹೋವೆ, ಜಗ್ ಕೆ ನಾಥ್** ॥ 2 ॥

ಹೇ ವಿಶ್ವದ ಸ್ವಾಮಿಯೇ, ಎರಡೂ ಕರಗಳನ್ನು ಜೋಡಿಸಿ, ತಲೆ ತಗ್ಗಿಸಿ, ಭಕ್ತಿ ಹಾಗೂ ವಿನಮ್ರ ಪೂರ್ವಕವಾಗಿ ತಮಗೆ ನನ್ನ ನಮಸ್ಕಾರಗಳು.

**ದೋನೋ ಕರ್ ಕೊ ಜೋಡ್ ಕರ್, ಮಸ್ತಕ್ ಘುಟ್ನೆ ಟೇಕ್**
**ತುಝ್‌ಕೊ ಹೊ ಪ್ರಣಾಮ್ ಮಮ್ ಶತ್–ಶತ್ ಕೋಟಿ ಅನೇಕ್** ॥ 3 ॥

ಎರಡೂ ಕರಗಳನ್ನು ಜೋಡಿಸಿ, ತಲೆ ಹಾಗೂ ಮೊಣಕಾಲನ್ನು ನೆಲಕ್ಕೆ ಮುಟ್ಟಿಸಿ, ತಮಗೆ ನನ್ನ ಅನಂತ ಕೋಟಿ ನಮಸ್ಕಾರಗಳು.

**ಪಾಪ್ ಹರಣ್ ಮಂಗಲ್ ಕರಣ್ ಚರಣ್ ಶರಣ್ ಕಾ ಧ್ಯಾನ್**
**ಧಾರ್ ಕರೂಂ ಪ್ರಣಾಮ್ ಮ್ಯೆ, ತುಜ್‌ಕೊ ಶಕ್ತಿನಿಧಾನ್ ॥ 4 ॥**

ಪಾಪನಾಶಕ, ಮಂಗಳಕಾರಕ, ಶರಣ ನೀಡುವ ತಮ್ಮ ಪಾದ ಸ್ಮರಣೆಯನ್ನು ಮಾಡುತ್ತಾ ಶಕ್ತಿಯ ಭಂಡಾರವಾದ ತಮಗೆ ನಮಸ್ಕರಿಸುತ್ತೇನೆ.

**ಭಕ್ತಿಭಾವ್, ಶುಭ್ ಭಾವನಾ, ಮನ್ ಮೇ ಭರ್ ಭರ್‌ಪೂರ್**
**ಶ್ರದ್ಧಾಸೆ ತುಝ್‌ಕೊ ನಮೂಂ ಮೇರೇ ರಾಮ್ ಹಜೂರ್ ॥5॥**

ನನ್ನ ಮನಸ್ಸನ್ನು ಭಕ್ತಿ ಹಾಗೂ ಸದ್ಭಾವನೆಗಳಿಂದ ತುಂಬಿಸಿಕೊಂಡು ಸಿದ್ಧನಾಗಿ ಹೇ ನನ್ನ ಶ್ರೀರಾಮ ಪ್ರಭುವೇ, ತಮಗೆ ಶ್ರದ್ಧಾಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

**ಜ್ಯೋತಿರ್ಮಯ್ ಜಗದೀಶ್ ಹ್ಯೆ ತೇಜೋಮಯ್ ಅಪಾರ್**
**ಪರಮ್ ಪುರುಷ್ ಪಾವನ್ ಪರಮ್**
**ತುಜ್‌ಕೋ ಹೋ ನಮಸ್ಕಾರ್ ॥ 6 ॥**

ಪ್ರಕಾಶ ಸ್ವರೂಪೀ, ಅಸೀಮ ತೇಜಸ್ಸಿನ ಜಗತ್ತಿನ ಸ್ವಾಮಿಯೇ ಸಕಲರನ್ನು ಪವಿತ್ರಗೊಳಿಸುವವನೇ, ಸರ್ವೋತ್ತಮ ಪರಮಾತ್ಮನೇ (ಪುರುಷೋತ್ತಮನೇ) ತಮಗೆ ನಮಸ್ಕಾರಗಳು.

**ಸತ್ಯ್ ಜ್ಞಾನ್ ಆನಂದ್ ಕೆ ಪರಮ್ ಧಾಮ್ ಶ್ರೀರಾಮ್**
**ಪುಲಕಿತ್ ಹೋ ಮೇರಾ ತುಝೇ ಹೋವೆ ಬಹು ಪ್ರಣಾಮ್ ॥7॥**

ಸತ್ಯ ಜ್ಞಾನ ಆನಂದದ ಸರ್ವೋಚ್ಚ ಮಂದಿರವಾದ ಶ್ರೀರಾಮನೇ! ರೋಮಾಂಚಿತಗೊಂಡು ಪುಲಕಿತನಾದ ನನ್ನಿಂದ ತಮಗೆ ಅನೇಕ ನಮಸ್ಕಾರಗಳು.

ಇಲ್ಲಿ ಶ್ರೀರಾಮನನ್ನು ಸತ್ಯ ಜ್ಞಾನ ಆನಂದಗಳ ಪರಂಧಾಮ ಅರ್ಥಾತ್ ಅನಂತ ಬ್ರಹ್ಮಸ್ವರೂಪವೆನ್ನಲಾಗಿದೆ.

## ಪ್ರಾತಃ ಪಾಠ

ಪರಮಾತ್ಮಾ ಶ್ರೀ ರಾಮ್ ಪರಮ್ ಸತ್ಯ್ ಪ್ರಕಾಶ್ ರೂಪ್
ಪರಮ್ ಜ್ಞಾನಾನಂದ್ ಸ್ವರೂಪ್ ಸರ್ವ್ ಶಕ್ತಿಮಾನ್
ಏಕ್ಯ ವಾ ದ್ವಿತೀಯ್ ಪರಮೇಶ್ವರ್ ಪರಮ್ ಪುರುಷ್
ದಯಾಲು ದೇವಾದಿದೇವ್ ಹೈ ಉಸಕೋ ಬಾರ್ ಬಾರ್
ನಮಸ್ಕಾರ್, ನಮಸ್ಕಾರ್, ನಮಸ್ಕಾರ್, ನಮಸ್ಕಾರ್

ಶ್ರೀರಾಮನು ಸರ್ವೋತ್ತಮನಾಗಿದ್ದು ಮಹಾನ್ ಆತ್ಮನಾಗಿದ್ದಾನೆ. ಆತನು ಪರಮ ಸತ್ಯವಾಗಿದ್ದು ಅಪರಿವರ್ತನ ಶೀಲನಾಗಿದ್ದಾನೆ. ತೇಜೋಮಯನಾಗಿದ್ದಾನೆ. ಸರ್ವೋಚ್ಚ ಜ್ಞಾನ ಹಾಗೂ ಸರ್ವಾಧಿಕ ಆನಂದ ಆತನ ಸ್ವಭಾವವಾಗಿದೆ. ಆತನು ಸರ್ವಶಕ್ತಿಗಳ ಭಂಡಾರ ವಾಗಿದ್ದು ಆತನಿಗೆ ಸರಿ ಸಮಾನರು ಬೇರೆಲ್ಲೂ ದೊರಕುವುದಿಲ್ಲ. ಆತನು ಎಲ್ಲರ ಶಾಸಕನಾಗಿದ್ದು ಸ್ವಾಮಿಯಾಗಿದ್ದಾನೆ. ಪುರುಷೋತ್ತಮ ನಾಗಿದ್ದು ದಯಾಳುವಾಗಿದ್ದಾನೆ. ದೇವಾನುದೇವತೆಗಳಿಗೆ ದೇವನಾಗಿ ದ್ದಾನೆ. ಅಂಥವನಿಗೆ ನಮಸ್ಕಾರ ನಮಸ್ಕಾರ ನಮಸ್ಕಾರ.

18

# ಅಮೃತವಾಣಿ

ರಾಮಾಮೃತ್ ಪದ್ ಪಾವನ್ ವಾಣಿ
ರಾಮ್ ನಾಮ್ ಧುನ್ ಸುಧಾ ಸಮಾನಿ
ಪಾವನ್ ಪಾಠ್ ರಾಮ್ ಗುಣ್ ಗ್ರಾಮ್
ರಾಮ್ ರಾಮ್ ಜಪ್ ರಾಮ್ ಹೀ ರಾಮ್ ॥ 1 ॥

ರಾಮ ಎನ್ನುವ ಶಬ್ದ ಅಮರತ್ವವನ್ನು ನೀಡುವ ಮಂತ್ರವಾಗಿದೆ. ರಾಮ ನಾಮದ ಗುಣಗಾನ ಅಮೃತಕ್ಕೆ ಸಮಾನವಾಗಿದೆ. ರಾಮನ ಗುಣಗಳ ಸಮೂಹವು ಪವಿತ್ರ ಗ್ರಂಥವಾಗಿದೆ, ಪಾವನಗೊಳಿಸುವಂಥದ್ದಾಗಿದೆ. ಆದ್ದರಿಂದ ರಾಮನಾಮವನ್ನು ಭಜಿಸಿರಿ.

ಪರಮ್ ಸತ್ಯ್ ಪರಮ್ ವಿಜ್ಞಾನ್
ಜ್ಯೋತಿ ಸ್ವರೂಪ್ ರಾಮ್ ಭಗವಾನ್
ಪರಮಾನಂದ್ ಸರ್ವ್ ಶಕ್ತಿಮಾನ್
ರಾಮ್ ಪರಮ್ ಹೈ ರಾಮ್ ಮಹಾನ್ ॥ 2 ॥

ರಾಮನಾಮ ಸತ್ಯವಾದದ್ದು. ಅವನು ಪ್ರಕಾಶ ರೂಪಿಯಾಗಿದ್ದು ಸರ್ವೋಚ್ಚಜ್ಞಾನ ಹಾಗೂ ಅನುಭವವನ್ನು ಹೊಂದಿದವನಾಗಿದ್ದಾನೆ. ಸರ್ವೋತ್ಕೃಷ್ಟ ಶಕ್ತಿ ಆನಂದಗಳಿಂದ ಸಂಪನ್ನನಾದ ಶ್ರೀರಾಮ ನಾಮವು ಮಹತ್ವವುಳ್ಳದ್ದಾಗಿದ್ದು, ಸರ್ವೋತ್ತಮವಾಗಿದೆ.

ಅಮೃತ್ ವಾಣಿ ನಾಮ್ ಉಚ್ಚಾರಣ್
ರಾಮ್ ರಾಮ್ ಸುಖ್ ಸಿದ್ಧೀ ಕಾರಣ್
ಅಮೃತವಾಣಿ ಅಮೃತ್ ಶ್ರೀನಾಮ್
ರಾಮ್ ರಾಮ್ ಮುದ್ ಮಂಗಲ್ ಧಾಮ್ ॥ 3 ॥

ರಾಮನಾಮದ ಉಚ್ಚಾರಣೆಯು, ಅಮೃತ ಶಬ್ದವನ್ನು ನುಡಿಯುವು ದಾಗಿದೆ. ರಾಮನಾಮವು ಸುಖ ಸಫಲತೆಗಳನ್ನು ಪ್ರದಾನ ಮಾಡು ವಂಥದ್ದಾಗಿದೆ. ರಾಮನಾಮವು ಅಮೃತವಾಗಿದ್ದು, ಅಮೃತವಾಣಿ ಯಾಗಿದೆ. ಹರ್ಷ ಆನಂದಗಳನ್ನು ನೀಡುವುದಾಗಿದೆ.

**ಅಮೃತ್ ರೂಪ್ ರಾಮ್ ಗುಣಗಾನ್**
**ಅಮೃತ್ ಕಥನ್ ರಾಮ್ ವ್ಯಾಖ್ಯಾನ್**
**ಅಮೃತ್ ವಚನ್ ರಾಮ್ ಕಿ ಚರ್ಚಾ**
**ಸುಧಾ ಸಮಗೀತ್ ರಾಮ್ ಕಿ ಅರ್ಚಾ** || 4 ||

ರಾಮನ ಗುಣಗಾನ (ಸ್ತುತಿ) ಅಮೃತ ತುಲ್ಯವಾಗಿದೆ. ರಾಮನ ಕಥೆ ಅಮರವಾಗಿದೆ. ರಾಮನ ಚರ್ಚೆಯಲ್ಲಿನ ಮಾತುಗಳೂ ಅಮೃತ ವಾಗಿವೆ. ರಾಮನ ಪೂಜೆಯು ಅಮೃತ ಸಮಾನ ಗೀತೆಯಾಗಿದೆ.

**ಅಮೃತ್ ಮನನ್ ರಾಮ್ ಕಾ ಜಾಪ್**
**ರಾಮ್ ರಾಮ್ ಪ್ರಭು ರಾಮ್ ಅಲಾಪ್**
**ಅಮೃತ್ ಚಿಂತನ್ ರಾಮ್ ಕಾ ಧ್ಯಾನ್**
**ರಾಮ್ ಶಬ್ದ್ ಮೆ ಶುಚಿ ಸಮಾಧಾನ್** || 5 ||

ರಾಮನಾಮದ ಜಪವೆನ್ನುವುದು ವಿಚಾರರೂಢಿ ಅಮೃತವಾಗಿದೆ. ರಾಮ ರಾಮ ಪ್ರಭು, ಶ್ರೀರಾಮ ಎನ್ನುವುದು ಅಮೃತ ಸಂಭಾಷಣೆ ಯಾಗಿದೆ. ರಾಮ ಧ್ಯಾನ ಚಿತ್ತದಿಂದ ಮಾಡಲ್ಪಡುವ ಅಮೃತ ಚಿಂತನೆ ಯಾಗಿದೆ. ಅಂದರೆ ರಾಮ ಶಬ್ದದಲ್ಲಿ ಜಪ, ಧಾರಣ, ಧ್ಯಾನ ಎಲ್ಲವೂ ಸತ್ಯವಾದ ಉತ್ತರವೂ ಅಡಗಿದೆ 'ರಾಮ' ಶಬ್ದವು ಈ ಎಲ್ಲಾ ಅಭ್ಯಾಸ ಗಳಿಗೆ ಉಪಯುಕ್ತವಾಗಿದೆ.

ಮನನ, ಜಪ, ಆಲಾಪ, ಚಿಂತನೆ, ಧ್ಯಾನ, ಸಮಾಧಾನ ಇವೆಲ್ಲವೂ ರಾಮನಾಮದೊಂದಿಗೆ ಬೆರೆತು ಅಮೃತವಾಗಿ ಬಿಡುತ್ತದೆ. ಜಪ ಶಬ್ದದೊಂದಿಗೆ, ಮನನ ಅರ್ಥದೊಂದಿಗೆ, ಆಲಾಪ ಸ್ವರದೊಂದಿಗೆ, ಚಿಂತನೆ–ತತ್ವದೊಂದಿಗೆ, ಧ್ಯಾನ ಸ್ವರೂಪದೊಂದಿಗೆ ಸಂಬಂಧಿಸಲ್ಪಟ್ಟಿದೆ. ಸಮಾಧಾನದಲ್ಲಿ(ಸಮಾಧಿಯಲ್ಲಿ) ತ್ರಿಪುಟ ಧ್ಯೇಯ ಧ್ಯಾತ ಸುಧ್ಯಾತಗಳು ಲಯ ಹೊಂದುತ್ತವೆ.

ಅಮೃತ್ ರಸನಾ ವಹೀ ಕಹಾವೆ  
ರಾಮ್ ರಾಮ್ ಜಹಾಂ ನಾಮ್ ಸುಹಾವೆ  
ಅಮೃತ್ ಕರ್ಮ್ ನಾಮ್ ಕಮಾಯಿ  
ರಾಮ್ ರಾಮ್ ಪರಮ್ ಸುಖದಾಯೀ ॥ 6 ॥

ಯಾವ ನಾಲಿಗೆಯ ಮೇಲೆ ಶ್ರೀರಾಮನಾಮವು ವಿರಾಜಿಸುವುದೋ, ವಿಲಾಸಿಸುವುದೋ, ಅದು ಅಮೃತ ಸಮಾನವಾಗಿದ್ದು, ಮಧುರವಾಗಿರುತ್ತದೆ. ರಾಮನಾಮದಿಂದ ಗಳಿಸಲ್ಪಡುವ ಸಂಪತ್ತು ಸುಕೃತ ಸತ್ಕರ್ಮಗಳಾಗಿವೆ. ರಾಮನಾಮ ಅನಂತ ಸುಖಕೊಡುವ ಅವಿನಾಶೀ ಮಂತ್ರವಾಗಿದೆ.

ಅಮೃತ್ ರಾಮ್ ನಾಮ್ ಜೋ ಹಿ ಧ್ಯಾವೆ  
ಅಮೃತ್ ಪದ್ ಸೋಹಿ ಜನ್ ಪಾವೆ  
ರಾಮ್ ನಾಮ್ ಅಮೃತ್‌ರಸ್ ಸಾರ್  
ದೇತಾ ಪರಮ್ ಆನಂದ್ ಅಪಾರ್ ॥ 7 ॥

ಯಾರು ಅಮೃತಸಮಾನವಾದ ರಾಮನಾಮವನ್ನು ಧ್ಯಾನಿಸುವರೋ, ಅವರು ನಾಶವಿಲ್ಲದ ಪದವನ್ನು (ಮೋಕ್ಷಪದ) ಹೊಂದುವರು. ಅಂದರೆ ಎಲ್ಲಿಂದ ಪುನಃ ಸಂಸಾರಕ್ಕೆ ಹಿಂದಿರುಗಬೇಕಾದ್ದಿಲ್ಲವೋ ಅಂತಹ

ಸ್ಥಾನವನ್ನು ಹೊಂದುವರು. ಪರಮಾತ್ಮ ರಸಸ್ವರೂಪಿಯಾಗಿದ್ದು, ಅವಿನಾಶಿಯಾಗಿದ್ದಾನೆ. ಆ ಅಮೃತ ರಸದ ಸಾರವೇ ರಾಮನಾಮವಾಗಿದೆ. ಅದು ಎಣೆಯಿಲ್ಲದ ಸರ್ವೋತ್ತಮ ಆನಂದವನ್ನು ನೀಡುತ್ತದೆ.

**ಅಮೃತಪದ :** ಯಾವುದು ಸ್ವತಃ ಅಮರವಾಗಿದ್ದು ಇತರರನ್ನು ಅಮರರನ್ನಾಗಿಸುವ ಶಕ್ತಿಹೊಂದಿದೆಯೋ ಅದಕ್ಕೆ ಅನ್ವಯಿಸಲಾಗುತ್ತದೆ.

**ರಾಮ್ ರಾಮ್ ಜಪ್ ಹೇ ಮನಾ**
**ಅಮೃತವಾಣಿ ಮಾನ್**
**ರಾಮ್ ನಾಮ್ ಮೆ ರಾಮ್ ಕೊ**
**ಸದಾ ವಿರಾಜಿತ್ ಜಾನ್** ॥ 8 ॥

ಎಲೈ ಮನಸ್ಸೇ, ಶ್ರೀರಾಮನಾಮವು ಅಮೃತ ಪ್ರದಾನ ಮಾಡುವ ಶಬ್ದವೆಂದು ಅರಿತು ಪುನಃ ಪುನಃ ಅದನ್ನು ಉಚ್ಚಾರಣೆ ಮಾಡು. ಈ ಹೆಸರಿನಲ್ಲಿ ಪರಬ್ರಹ್ಮ, ಪರಮಾತ್ಮ ಶ್ರೀರಾಮ ಸದಾ ವಿರಾಜಮಾನವಾಗಿರುವನೆಂದು ತಿಳಿ.

**ರಾಮ್ ನಾಮ್ ಮುದ್ ಮಂಗಲಕಾರಿ**
**ವಿಘ್ನ್ ಹರೇ ಸಬ್ ಪಾತಕ್ ಹಾರಿ**
**ರಾಮ್ ನಾಮ್ ಶುಭ್ ಶಕುನ್ ಮಹಾನ್**
**ಸ್ವಸ್ತಿ ಶಾಂತಿ ಶಿವಕರ್ ಕಲ್ಯಾಣ್** ॥ 9 ॥

ರಾಮನಾಮವು ಕಲ್ಯಾಣ ಹಾಗೂ ಆನಂದವನ್ನುಂಟು ಮಾಡುವುದಾಗಿದೆ. ಪಾಪ ಹಾಗೂ ಅಡೆತಡೆಗಳನ್ನು ನಾಶಮಾಡುವುದಾಗಿದೆ. ರಾಮನಾಮ ಮಹತ್ವವುಳ್ಳದ್ದಾಗಿದ್ದು ಶುಭಸಂಕೇತವಾಗಿದೆ. ಮಂಗಲ, ಶಾಂತಿ, ಕಲ್ಯಾಣ ಹಾಗೂ ಪ್ರಸನ್ನತೆಯನ್ನುಂಟು ಮಾಡುವುದಾಗಿದೆ.

ರಾಮ್ ರಾಮ್ ಶ್ರೀ ರಾಮ್ ವಿಚಾರ್
ಮಾನೀಯೆ ಉತ್ತಮ್ ಮಂಗಲಾಚಾರ್
ರಾಮ್ ರಾಮ್ ಮನ್ ಮುಖ್ ಸೆ ಗಾನಾ
ಮನೋ ಮಧುರ್ ಮನೋರಥ್ ಪಾನಾ ॥ 10 ॥

ರಾಮನಾಮದ ವಿಚಾರ ಮನದೊಳಗೆ ಉದ್ಭವಿಸುವುದೇ ಶುಭಾರಂಭವೆಂದು ತಿಳಿಯಿರಿ. ಬಾಯಿ ಮತ್ತು ಮನಸ್ಸಿನಿಂದ ರಾಮ ಧ್ಯಾನವನ್ನು ಮಾಡುವುದರಿಂದ, ಮನಸ್ಸು ಬಯಸುವ ಫಲ ಪ್ರಾಪ್ತಿಯಾಗುವುದು. ಅರ್ಥಾತ್ ಮನೋಕಾಮನೆಗಳು ಪೂರೈಸಲ್ಪಡುವುವು.

ರಾಮ್ ನಾಮ್ ಜೋ ಜನ್ ಮನ್ ಲಾವೆ
ಉಸ್ ಮೆ ಶುಭ್ ಸಭಿ ಬಸ್ ಜಾವೆ
ಜಹಾಂ ಹೊ ರಾಮ್ ನಾಮ್ ಧುನ್ ನಾದ್
ಭಾಗೇ ವಹಾಂ ಸೆ ವಿಷಮ್ ವಿಷಾದ್ ॥ 11 ॥

ಯಾರು ತಮ್ಮ ಮನದೊಳಗೆ ರಾಮನಾಮವನ್ನು ಪ್ರತಿಷ್ಠಾಪಿಸಿಕೊಳ್ಳುವರೋ, ಅವರಲ್ಲಿ ಎಲ್ಲಾ ರೀತಿಯ ಧನ್ಯತೆಯೂ ಮನೆಮಾಡುವುದು. ಅಂದರೆ ಅವರಲ್ಲಿ ಸುಖ ಸೌಭಾಗ್ಯ ಸಮೃದ್ಧಿಯಾಗುವುದು, ಎಲ್ಲ ರೀತಿಯ ಆಶೀರ್ವಾದಗಳೂ ಪ್ರಾಪ್ತಿಯಾಗುವುವು. ರಾಮನಾಮದ ಧ್ವನಿ ಎಲ್ಲಿ ಕೇಳಿ ಬರುವುದೋ ಅಲ್ಲಿ ದುಃಖ ಪೀಡೆಯನ್ನುಂಟುಮಾಡುವ ಶೋಕ ಸಂಕಟಗಳು ಹೆಸರಿಲ್ಲದಂತಾಗುವುವು.

**ವಿಷಮ ವಿಷಾದ :** ಸತ್ವಗುಣದಿಂದ ಸುಖ, ರಜೋಗುಣದಿಂದ ದುಃಖ, ತಮೋಗುಣದಿಂದ ವಿಷಾದ, ಆಲಸ್ಯ ಪ್ರಮಾದಗಳು ಪ್ರಾದುರ್ಭಾವವಾಗುತ್ತವೆ.

**ವಿಷಾದ :** ಯಾವ ದುಃಖದಿಂದ ಬಿಡುಗಡೆಯ ಉಪಾಯ ಕಂಡು ಬರುವುದಿಲ್ಲವೋ ಅದು ವಿಷಮವಾದಾಗ (ಅಸಮ) ಸ್ವಲ್ಪವೂ ಪರಿಜ್ಞಾನ ವಿರುವುದಿಲ್ಲ.

**ರಾಮ್ ನಾಮ್ ಮನ್ ತಪ್ತ್ ಬುಜಾವೆ**
**ಸುಧಾ ರಸ್ ಸೀಂಚ್ ಶಾಂತಿ ಲೇ ಆವೆ**
**ರಾಮ್ ರಾಮ್ ಜಪಿಯೆ ಕರ್ ಭಾವ್**
**ಸುವಿಧಾ ಸುವಿಧಿ ಬನೇ ಬನಾವ್** ॥ 12 ॥

ರಾಮನಾಮವು ಮನಸ್ಸಿನ ಪೀಡೆಗಳನ್ನು ದೂರಮಾಡಿ ಮನಸ್ಸನ್ನು ಅಮೃತ ತತ್ವದಿಂದ ಸಿಂಪಡಿಸಿ, ಶಾಂತಿಯನ್ನು ತಂದುಕೊಡುತ್ತದೆ. ಆದ್ದರಿಂದ ಪ್ರೇಮಪೂರ್ವಕವಾಗಿ ಸಂಪೂರ್ಣ ಮನಸ್ಸಿನಿಂದ ರಾಮ ನಾಮದ ಜಪ ಮಾಡಿರಿ. ಇದರಿಂದ ಎಲ್ಲ ಪ್ರಕಾರದ ಸುಖ, ಆರಾಮ, ಅನುಕೂಲಗಳು ಒದಗುವುದು.

**ರಾಮ್ ನಾಮ್ ಸಿಮರೊ ಸದಾ**
**ಅತಿಶಯ್ ಮಂಗಲ್ ಮೂಲ್**
**ವಿಷಮ್ ವಿಕಟ್ ಸಂಕಟ್ ಹರಣ್**
**ಕಾರಕ್ ಸಬ್ ಅನುಕೂಲ್** ॥ 13 ॥

ಎಲೈ ಸಾಧಕನೇ, ಸದಾ ರಾಮನನ್ನೇ ಪ್ರೇಮಪೂರ್ವಕವಾಗಿ ಧ್ಯಾನಿಸಿ, ಸ್ಮರಿಸು. ರಾಮನಾಮ ಅತ್ಯಂತ ಮಂಗಳಕರವಾಗಿದ್ದು, ಮಂಗಳ ಸ್ತೋತ್ರವಾಗಿದೆ. ರಾಮನಾಮವು ಪೀಡೆಯನ್ನುಂಟುಮಾಡುವ ಅಸಹ್ಯ ಹಾಗೂ ಭೀಕರವಾದ ದುಃಖ ಹಾಗೂ ವಿಪತ್ತುಗಳನ್ನು ದೂರಮಾಡಿ, ಎಲ್ಲ ರೀತಿಯ ಅನುಕೂಲ, ಸುಖ, ಲಾಭವನ್ನುಂಟುಮಾಡುವುದಾಗಿದೆ.

**ವಿಷಮ – ವಿಕಟ :** ಸಂಕಟ ಒಮ್ಮೆಗೇ ಎಲ್ಲಕಡೆಯಿಂದಲೂ ಅಸಹ್ಯವಾದ ಭಯಂಕರ ವಿಪತ್ತುಗಳು ಬಂದು ಮುತ್ತಿಕೊಳ್ಳುವುವು.

**ಜಪನಾ ರಾಮ್ ರಾಮ್ ಹೈ ಸುಕೃತ್**
**ರಾಮ್ ನಾಮ್ ಹೈ ನಾಶಕ್ ದುಷ್ಕೃತ್**
**ಸಿಮರೆ ರಾಮ್ ರಾಮ್ ಹಿ ಜೊ ಜನ್**
**ಉಸಕಾ ಹೊ ಶುಚಿತರ್ ತನ್ ಮನ್ ॥ 14 ॥**

ರಾಮನಾಮವನ್ನು ಜಪಿಸುವುದು ಸತ್ಕರ್ಮವಾಗಿದೆ, ಪುಣ್ಯಕರ್ಮ ವಾಗಿದೆ. ರಾಮನಾಮವು ಕುಕರ್ಮಗಳನ್ನು ನಾಶಮಾಡುವುದಾಗಿದೆ. ಯಾರು ರಾಮನಾಮದ ಜಪವನ್ನು ಶ್ರದ್ಧಾಪೂರ್ವಕವಾಗಿ ಮಾಡು ವರೋ, ಅವರ ತನುಮನಗಳೆರಡು ಶುದ್ಧವಾಗುವುವು.

**ಜಿಸ್ ಮೆ ರಾಮ್ ನಾಮ್ ಶುಭ್ ಜಾಗೇ**
**ಉಸ್ ಕೆ ಪಾಪ್ ತಾಪ್ ಸಬ್ ಭಾಗೇ**
**ಮನ್ ಸೆ ರಾಮ್ ನಾಮ್ ಜೋ ಉಚ್ಚಾರೆ**
**ಉಸಕೆ ಭಾಗೇಂ ಭ್ರಮ್ ಭಯ್ ಸಾರೆ ॥ 15 ॥**

ಯಾರಲ್ಲಿ ಶುಭಕರವಾದ ರಾಮನಾಮವು ಜಾಗೃತಗೊಳ್ಳು ವುದೋ, ಅವರಿಂದ ದುಃಖ ಪಾಪಗಳು ಓಡಿಹೋಗಿ ಬಿಡುವುವು. ರಾಮನಾಮವನ್ನು ಯಾರು ಏಕಾಗ್ರಚಿತ್ತರಾಗಿ ಜಪಿಸುವರೋ, ಅವರ ಭಯ ಸಂಶಯಗಳೆಲ್ಲವೂ ದೂರವಾಗಿ ಬಿಡುವುವು.

**ತಾಪ :** ಮೂರು ಪ್ರಕಾರದ ದುಃಖ.

1. **ಆಧ್ಯಾತ್ಮಿಕ :** (ದೈಹಿಕ ಏವಂ ಮಾನಸಿಕ) ಜ್ವರ, ಕಾಮ, ಕ್ರೋಧ, ಚಿಂತೆ, ಶೋಕ, ಆದಿ.

2. **ಆಧಿಭೌತಿಕ :** ಇತರ ಪ್ರಾಣಿಗಳಿಂದ ಉಂಟಾಗುವ ದುಃಖ ಯಾವ ರೀತಿ ಎಂದರೆ ಚೋರನಿಂದ, ಸರ್ಪ, ಚೇಳು ಇತ್ಯಾದಿಗಳಿಂದ.

3. **ಆದಿದೈವಿಕ :** ದೈವಿ ಕಾರಣಗಳಿಂದ ಉಂಟಾಗುವ ದುಃಖ ಭೂಕಂಪ, ನೆರೆಹಾವಳಿ, ಬರ ಇತ್ಯಾದಿ.

**ಭಯ :** ಅನಿಷ್ಟವಾಗಬಹುದೆಂಬ ಶಂಕೆ. ಜನ ಧನ ಮಾನ ಹಾನಿ, ರೋಗ ರುಜಿನ ಮೃತ್ಯುವಿನ ಭಯ.

**ಜಿಸ್ ಮೆ ಬಸ್ ಜಾಯೆ ರಾಮ್ ಸುನಾಮ್**
**ಹೋವೆ ವಹ್ ಜನ್ ಪೂರ್ಣ್ ಕಾಮ್**
**ಚಿತ್ತ್ ಮೆ ರಾಮ್ ರಾಮ್ ಜೊ ಸಿಮರೆ**
**ನಿಶ್ಚಯ್ ಭವ್ ಸಾಗರ್ ಸೆ ತರೇ ॥ 16 ॥**

ಸುಂದರ ಮಧುರ ರಾಮನಾಮವು ಯಾರಲ್ಲಿ ಪ್ರತಿಷ್ಠಿತವಾಗುವುದೋ, ಅವರ ಎಲ್ಲ ಮನೋಕಾಮನೆಗಳೂ ಪೂರ್ಣಗೊಳ್ಳುವುವು. ಚಿತ್ತದಲ್ಲಿ ರಾಮನಾಮವನ್ನು ಯಾರು ಭಜಿಸುವರೋ, ನಿಸ್ಸಂದೇಹವಾಗಿ ಅವರು ಸಂಸಾರ ಸಾಗರದಿಂದ, ಪಾರಾಗುವರು, ಮುಕ್ತರಾಗುವರು.

**ರಾಮ್ ಸಿಮರನ್ ಹೋವೆ ಸಹಾಯೀ**
**ರಾಮ್ ಸಿಮರನ್ ಹೈ ಸುಖದಾಯೀ**
**ರಾಮ್ ಸಿಮರನ್ ಸಬ್ ಸೇ ಊಂಚಾ**
**ರಾಮ ಶಕ್ತಿ ಸುಖ್ ಜ್ಞಾನ್ ಸಮೂಚಾ ॥ 17 ॥**

ರಾಮನಾಮದ ಜಪವು ಎಲ್ಲಾ ರೀತಿಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು, ಸುಖವನ್ನು ಹೊಂದಲು ಸಹಾಯಕವಾಗಿದೆ. ಸದ್ಭಾವನೆಯಿಂದ ಭಗವಂತನ ನಾಮಸ್ಮರಣೆ ಮಾಡುವುದು, ಬೇರೆಲ್ಲ ಕರ್ಮಗಳಿಗಿಂತಲೂ

ಶ್ರೇಷ್ಠವಾಗಿದೆ, ಉತ್ತಮ ಕರ್ಮವಾಗಿದೆ. ಏಕೆಂದರೆ ಶ್ರೀರಾಮ ಪ್ರಭು ಬಲ ಸಾಮರ್ಥ್ಯಗಳ, ಸರ್ವಶಕ್ತಿಯ, ಪೂರ್ಣಜ್ಞಾನದ ಭಂಡಾರವಾಗಿದ್ದಾನೆ.

ಸಿಮರನ್ : ಸದ್ಭಾವನೆಯಿಂದ ಭಗವಂತನ ನಾಮಸ್ಮರಣೆ ಮಾಡುವುದು.

ರಾಮ್ ರಾಮ್ ಹಿ ಸಿಮರ್ ಮನ್
ರಾಮ್ ರಾಮ್ ಶ್ರೀ ರಾಮ್
ರಾಮ್ ರಾಮ್ ಶ್ರೀ ರಾಮ್ ಭಜ್
ರಾಮ್ ರಾಮ್ ಹರಿ ನಾಮ್ ॥ 18 ॥

ಎಲೈ ಮನಸ್ಸೇ, ರಾಮನಾಮದ ಸ್ಮರಣೆಯನ್ನು ಮಾಡು. ಶ್ರೀರಾಮನೇ ಪರಮೇಶ್ವರನು. ರಾಮನಾಮದ ಸ್ಮರಣೆ ಮಾಡಿ ಪ್ರಭುರಾಮನ ನಾಮ ರಸಾಸ್ವಾದನೆಯನ್ನು ಮಾಡು. ರಾಮ ನಾಮ ಹರಿಯ ನಾಮವಾಗಿದೆ.

ಹರಿ : ಪಾಪಗಳನ್ನು ಹರಣಮಾಡುವ ಪರಮಾತ್ಮಾ .

ಭಜ : ಯಾವ ರೀತಿ ಹಸು ಮೇವನ್ನು ಜಗಿದು ರಸ ಹೀರುವುದೋ, ಅದೇ ರೀತಿ ಪ್ರಭುರಾಮನ ಸ್ಥಿತಿಯನ್ನು ಪುನಃ ಪುನಃ ಮನದೊಳಗೆ ತಂದುಕೊಂಡು ರಸಾಸ್ವಾದನೆ ಮಾಡುವುದಕ್ಕೆ ಭಜನೆ ಎನ್ನಲಾಗುತ್ತದೆ.

ಮಾತಾ ಪಿತಾ ಬಾಂಧವ್ ಸುತ್ ದಾರಾ
ಧನ್ ಜನ್ ಸಾಜನ್ ಸಖಾ ಪ್ಯಾರಾ
ಅಂತ್ ಕಾಲ್ ದೆ ಸಕೆ ನಾ ಸಹಾರಾ
ರಾಮ್ ರಾಮ್ ತೇರಾ ತಾರನ್ ಹಾರಾ ॥ 19 ॥

ತಂದೆ, ತಾಯಿ, ಅಣ್ಣ, ಹೆಂಡತಿ, ಮಗ, ಧನ, ಬಾಂಧವರು, ಪತಿ, ಪ್ರಿಯತಮರು, ಪ್ರೀತಿಪಾತ್ರರು, ಮಿತ್ರರು, ಇವರ್ಯಾರೂ ಮರಣಕಾಲದಲ್ಲಿ ನಮಗೆ ಸಹಾಯಕರಾಗುವುದಿಲ್ಲ. ಕೇವಲ ಆ

ರಾಮನಾಮವೊಂದೇ ನಮ್ಮನ್ನು ಪಾರುಮಾಡುವುದಾಗಿದೆ, ನಮ್ಮನ್ನು ಸಂರಕ್ಷಿಸುವುದಾಗಿದೆ.

ಸಿಮರನ್ ರಾಮ್ ನಾಮ್ ಹೈ ಸಂಗೀ
ಸಖಾ ಸ್ನೇಹೀ ಸುಹೃದ್ ಶುಭ್ ಅಂಗೀ
ಯುಗ್ ಯುಗ್ ಕಾ ಹೈ ರಾಮ್ ಸಹೇಲಾ
ರಾಮ್ ಭಕ್ತ್ ನಹಿಂ ರಹೆ ಅಕೇಲಾ ॥ 20 ॥

ರಾಮನಾಮದ ಜಪವೊಂದೇ ಸದಾ ನಮ್ಮೊಡನಿರುವ ಸಂಗಾತಿಯಾಗಿದೆ, ಮಿತ್ರನಾಗಿದೆ, ಪ್ರೇಮಿಯಾಗಿದೆ. ಸದಾ ನಮಗೆ ಶುಭ ಹಾಗೂ ಹಿತವನ್ನುಂಟುಮಾಡುವುದಾಗಿದೆ. ಅನಾದಿಕಾಲದಿಂದಲೂ ರಾಮನು ಪ್ರತಿಯುಗದಲ್ಲಿಯೂ ಕೂಡಾ ಸದಾ ನಮ್ಮೊಡನಿರುವ ಸಂಗಾತಿಯಾಗಿದ್ದಾನೆ. ಆದ್ದರಿಂದ ಶ್ರೀ ರಾಮನ ಭಕ್ತನಾದವನೆಂದೂ ಒಂಟಿಯಾಗಿರುವುದಿಲ್ಲ, ಪ್ರಭು ಶ್ರೀರಾಮ ಸದಾ ತನ್ನ ಭಕ್ತರ ಜೊತೆಯಲ್ಲಿಯೇ ಇರುತ್ತಾನೆ.

ನಿರ್ಜನ್ ವನ್ ವಿಪದ್ ಹೋ ಘೋರ್
ನಿಬಿಡ್ ನಿಶಾ ತಮ್ ಸಬ್ ಓರ್
ಜೋತ್ ಜಬ್ ರಾಮ್ ನಾಮ್ ಕೀ ಜಗೆ
ಸಂಕಟ್ ಸರ್ವ್ ಸಹಜ್ ಸೆ ಭಗೆ ॥ 21 ॥

ನಿರ್ಜನವಾದ ಕಾಡೇ ಆಗಿರಲಿ, ಭಯಂಕರ ಸಂಕಟ ವಿಪತ್ತು ಒದಗಿರಲಿ, ಎಲ್ಲೆಡೆ ದಟ್ಟವಾದ ಕಾರ್ಗತ್ತಲೇ ಹರಡಿರಲಿ, ರಾಮ ನಾಮದ ಜ್ಯೋತಿ ಬೆಳಗುತ್ತಿರುವಂತೆಯೇ ಅನಾಯಾಸವಾಗಿ ದುಃಖ ದೌರ್ಭಾಗ್ಯ ದುರ್ದಿನಗಳು ಸರಿದುಹೋಗಿ ಬಿಡುವುವು.

ಬಾಧಾ ಬಡೀ ವಿಷಮ್ ಜಬ್ ಆವೆ
ವೈರ್ ವಿರೋಧ್ ವಿಘ್ನ್ ಬಡ್ ಜಾವೆ
ರಾಮ್ ನಾಮ್ ಜಪಿಯೆ ಸುಖ್ ದಾತಾ
ಸಚ್ಚಾ ಸಾಥಿ ಜೋ ಹಿತಕರ್ ತ್ರಾತಾ ॥ 22 ॥

ಗೊಂದಲಮಯ ಸನ್ನಿವೇಶಗಳಿಂದ, ಅಡ್ಡಿ ಆತಂಕಗಳು ಹೆಚ್ಚಿದಾಗ, ಶತ್ರುಗಳ ಕಾಟ ವಿಪರೀತವಾದಾಗ, ಪ್ರತಿಕೂಲ ಅಡಚಣೆಗಳು ವೃದ್ಧಿಸಿದಾಗ; ಸನ್ಮಿತ್ರನಂತಿರುವ, ಹಿತವನ್ನುಂಟು ಮಾಡುವ, ರಕ್ಷಣೆ ನೀಡುವ, ಸುಖವನ್ನೀವ ರಾಮನಾಮವನ್ನು ಜಪಿಸಿರಿ.

ಮನ್ ಜಬ್ ಧೈರ್ಯ್ ಕೊ ನಹಿಂ ಪಾವೇ
ಕುಚಿಂತಾ ಚಿತ್ತ್ ಕೊ ಚೂರ್ ಬನಾವೆ
ರಾಮ್ ನಾಮ್ ಜಪೆ ಚಿಂತಾ ಚೂರಕ್
ಚಿಂತಾಮಣಿ ಚಿತ್ತ್ ಚಿಂತನ್ ಪೂರಕ್ ॥ 23 ॥

ಮನಸ್ಸು ಅಸ್ಥಿರಗೊಂಡು, ಧೈರ್ಯಗೆಟ್ಟಾಗ, ದುಷ್ಟ ವಿಚಾರಗಳು ಮನಸ್ಸನ್ನು ಛಿದ್ರಗೊಳಿಸಿ ನೆಮ್ಮದಿ ಕೆಡಿಸಿದಾಗ, ಚಿಂತೆಗಳು ಮನಸ್ಸನ್ನು ಮುತ್ತಿದಾಗ, ಅವೆಲ್ಲವನ್ನು ನಾಶಮಾಡುವ ನಾಶಕದಂತಿದೆ, ಶ್ರೀ ರಾಮ ನಾಮ. ರಾಮನಾಮವು ಮನದ ಇಚ್ಛೆಗಳನ್ನು, ಸಂಕಲ್ಪಗಳನ್ನು ಪೂರ್ಣಗೊಳಿಸುವಂತದ್ದಾಗಿದೆ. ಸದಾ ರಾಮನಾಮವನ್ನು ಸ್ಮರಿಸಿ ಭಜಿಸಿರಿ.

**ಚಿಂತಾಮಣಿ:** ಒಂದು ಕಾಲ್ಪನಿಕ ರತ್ನ ಅದು ಮನದ ಅಭೀಷ್ಟಗಳನ್ನು ಪೂರ್ಣಗೊಳಿಸಿ ಮನ ಬಯಸುವ ಫಲ ನೀಡುವಂಥದ್ದು.

ಶೋಕ್ ಸಾಗರ್ ಹೊ ಉಮಡಾ ಆತಾ,
ಅತಿ ದುಃಖ್ ಮೆ ಮನ್ ಘಬರಾತಾ
ಭಜಿಯೆ ರಾಮ್ ರಾಮ್ ಬಹು ಬಾರ್
ಜನ್ ಕಾ ಕರ್ತಾ ಬೆಡಾ ಪಾರ್ ॥ 24 ॥

29

ಜೀವನದಲ್ಲಿ ಶೋಕಸಾಗರದಲೆಗಳು, ಹಾಹಾಕಾರ ಹೆಚ್ಚಿಸಿದಾಗ ಸಂಕಟಗಳ ಮಹಾಪೂರವೇ ನುಗ್ಗಿ ಬಂದಾಗ, ಅತಿಯಾದ ದುಃಖದಿಂದ ಮನಸ್ಸು ಘಾಸಿಗೊಂಡು ವ್ಯಾಕುಲಗೊಂಡು ಬೆದರಿದಾಗ, ಸಂಕಟದಿಂದ ಪಾರುಮಾಡುವ ಶ್ರೀ ರಾಮನಾಮವನ್ನು ಪ್ರೇಮ ಪೂರ್ವಕವಾಗಿ ಸ್ಮರಿಸಿ ಜಪಿಸಿರಿ. ರಾಮನಾಮವು ಜೀವನರೂಪಿ ನಾವೆಯನ್ನು ದಡ ಮುಟ್ಟಿಸುವಂತದ್ದಾಗಿದೆ.

**ಕಡಿ ಘಡಿ ಕಠಿನತರ್ ಕಾಲ್**
**ಕಷ್ಟ್ ಕಠೋರ್ ಹೊ ಕ್ಲೇಶ್ ಕರಾಲ್**
**ರಾಮ್ ರಾಮ್ ಜಪಿಯೆ ಪ್ರತಿಪಾಲ್**
**ಸುಖ್ ದಾತಾ ಪ್ರಭು ದೀನ್‌ದಯಾಲ್** ॥ 25 ॥

ಕಷ್ಟಕಾಲದಲ್ಲಿ ದಿನದ ಇಪ್ಪತ್ನಾಲ್ಕು ಗಂಟೆಗಳೂ ಸಂಕಟಮಯ ವಾಗಿದ್ದಾಗ, ವ್ಯಕ್ತಿ ಕಠೋರವಾದ ಕಷ್ಟಗಳಿಂದ, ಭಯಾನಕ ವ್ಯಥೆ ಕ್ಲೇಶ ಗಳಲ್ಲಿ ಸಿಲುಕಿ ಗತಿಕೆಟ್ಟಾಗ, ಸುಖವನ್ನು ನೀಡುವ, ದೀನರ ಮೇಲೆ ದಯೆ ತೋರುವ ಪಾಲಕನಾದ ಪ್ರಭು ಶ್ರೀರಾಮನನ್ನು ಧ್ಯಾನಿಸಿ ಜಪಿಸಿರಿ.

**ಕ್ಲೇಶ**: ಐದು ಕ್ಲೇಶಗಳು.

ಅವಿದ್ಯಾ, ಅಸ್ಥಿಮತೆ, ಕೋಪ, ದ್ವೇಷ, ಅಭಿನಿವೇಶ ಇವುಗಳನ್ನು ಅವಿದ್ಯೆಯ ಐದು ಗ್ರಂಥಿಗಳೆಂದು, ಕ್ಲೇಶಕ್ಕೆ ಕಾರಣಗಳೆಂದು ಹೇಳಲಾಗುತ್ತದೆ.

**ಘಟನಾ ಘೋರ್ ಘಟೆ ಜಿಸ್ ಬೇರ್**
**ದುರ್ಜನ್ ದುಖಡೆ ಲೇವೆಂ ಘೇರ್**
**ಜಪಿಯೆ ರಾಮ್ ರಾಮ್ ಬಿನ್ ದೇರ್**
**ರಖಿಯೆ ರಾಮ್ ರಾಮ್ ಶುಭ್ ಟೇರ್** ॥ 26 ॥

ಯಾವುದಾದರೊಂದು ಭಯಾನಕ ಘಟನೆ ಘಟಿಸಿದಾಗ, ಕುಸಂಗ, ಕೆಟ್ಟ ವ್ಯಕ್ತಿಗಳು ಹಾಗೂ ದುಃಖ ನಮ್ಮನ್ನು ಮುತ್ತಿದಾಗ, ತಡಮಾಡದೆ ಬೇಗನೆ ರಾಮನಾಮವನ್ನು ಧ್ಯಾನಿಸಿ ಜಪಿಸಿರಿ. ಹಿತೈಷಿಯಂತಿರುವ ಅನುಗ್ರಹಶೀಲ ರಾಮನಾಮದ ಜಪವನ್ನು ಮುಂದುವರೆಸಿರಿ ಆರ್ತರಾಗಿ ಶ್ರದ್ಧಾಪೂರ್ವಕವಾಗಿ ಜಪಿಸುತ್ತಲೇ ಇರಿ.

**ರಾಮ್ ನಾಮ್ ಹೊ ಸದಾ ಸಹಾಯಕ್**
**ರಾಮ್ ನಾಮ್ ಸರ್ವ್ ಸುಖದಾಯಕ್**
**ರಾಮ್ ರಾಮ್ ಪ್ರಭು ರಾಮ್‌ಕೀ ಟೇಕ್**
**ಶರಣ್ ಶಾಂತಿ ಆಶ್ರಯ್ ಹ್ಯೆ ಏಕ್ ॥ 27 ॥**

ರಾಮನಾಮವು ಪ್ರತಿನಿತ್ಯ ಸಹಾಯ ಮಾಡುವಂಥದ್ದಾಗಿದೆ. ರಾಮನಾಮವು ಸರ್ವ್ಯಕ ಸುಖ ನೀಡುವಂಥದ್ದು. ಪ್ರಭು ಶ್ರೀ ರಾಮನ ನಾಮ ನಮಗೆ ಆಸರೆ, ಆಧಾರ ನೀಡುವಂಥದ್ದು. ಆತನ ಆಶ್ರಯವೇ ಶಾಂತಿಧಾಮವಾಗಿದೆ.

**ಪೂಂಜಿ ರಾಮ್ ನಾಮ್ ಕಿ ಪಾಯಿಯೇ**
**ಪಾಥೆಯ್ ಸಾಥ್ ನಾಮ್ ಲೇ ಜಾಯಿಯೆ**
**ನಾಶೆ ಜನ್ಮ್ ಮರಣ್ ಕಾ ಖಟಕಾ**
**ರಹೆ ರಾಮ್ ಭಕ್ತ್ ನಹಿಂ ಅಟಕಾ ॥ 28 ॥**

ಆದ್ದರಿಂದ ರಾಮನಾಮವೆಂಬ ಸಂಪತ್ತನ್ನು ಗಳಿಸಿಕೊಂಡು ಉಳಿಸಿ ಕೊಳ್ಳಿ. ರಾಮನಾಮವನ್ನೇ ಜೀವನ ಮಾರ್ಗದಲ್ಲಿ ವ್ಯಯಿಸಲು ತೆಗೆದುಕೊಂಡು ಹೋಗಿ. ಇದರಿಂದ ಜನನ ಮರಣಗಳ ಭಯ ನಾಶವಾಗುವುದು. ರಾಮಭಕ್ತನ ಯಾತ್ರೆ ಯಾವೊಂದೂ ಅಡೆತಡೆ ಯಿಲ್ಲದೆ ನಿರ್ವಿಘ್ನವಾಗಿ ಸಂಪನ್ನವಾಗುವುದು.

ರಾಮ್ ರಾಮ್ ಶ್ರೀ ರಾಮ್ ಹೈ
ತೀನ್ ಲೋಕ್ ಕಾ ನಾಥ್
ಪರಮ್ ಪುರುಷ್ ಪಾವನ್ ಪ್ರಭು
ಸದಾ ಕಾ ಸಂಗೀ ಸಾಥ್ ॥ 29 ॥

ಶ್ರೀರಾಮನು ಮೂರು ಲೋಕಗಳಿಗೂ ಒಡೆಯನಾಗಿದ್ದಾನೆ. ಸರ್ವೋತ್ತಮ ಸರ್ವೋಚ್ಚ ಪುರುಷನಾಗಿದ್ದಾನೆ. ಪಾವನಗೊಳಿಸುವವನಾಗಿದ್ದಾನೆ. ಸದಾ ಜೊತೆಯಿರುವ ಸಂಗಾತಿಯಾಗಿದ್ದಾನೆ.

ತ್ರಿಲೋಕ: ಮೃತ್ಯುಲೋಕ (ಭೂಲೋಕದಿಂದ ಪಾತಾಳ ಲೋಕದವರೆಗೆ ಅಂತರಿಕ್ಷ (ಭುವಲೋಕ) ಸ್ವರ್ಗಲೋಕ (ಸ್ವರ್ಗಲೋಕದಿಂದ ನಿತ್ಯ ಲೋಕದವರೆಗೆ).

ಯಜ್ಞ್ ತಪ್ ಧ್ಯಾನ್ ಯೋಗ್ ಹೀ ತ್ಯಾಗ್
ವನ್ ಕುಟಿ ವಾಸ್ ಅತಿ ವೈರಾಗ್
ರಾಮ್ ನಾಮ್ ಬಿನಾ ನೀರಸ್ ಫೋಕ್
ರಾಮ್ ರಾಮ್ ಜಪ್ ತರಿಯೆ ಲೋಕ್ ॥ 30 ॥

ಯಜ್ಞ, ತಪಸ್ಸು, ಧ್ಯಾನ, ತ್ಯಾಗ ಇವೆಲ್ಲವೂ ಭಗವಂತನ ಮಿಲನಕ್ಕೆ ಸಾಧನಗಳಾಗಿವೆ. ರಾಮನಾಮದ ಸ್ಮರಣೆಯಿಲ್ಲದೆ, ಕೇವಲ ವೈರಾಗ್ಯದಿಂದ ಕಾಡಿನೊಳಗೊಂದು ಮನೆಮಾಡಿ ಅದರಲ್ಲಿ ವಾಸಿಸಿದರಷ್ಟೇ ಸಾಲದು ಇಂತಹಾ ಕರ್ಮಗಳು ನೀರಸ ನಿರರ್ಥಕಗಳಾಗಿವೆ. ಆದ್ದರಿಂದ ರಾಮ ನಾಮವನ್ನು ಭಜಿಸಿ ಸಂಸಾರವನ್ನು ದಾಟಿರಿ.

ಯಜ್ಞ: ಯಾವ ಕರ್ಮಗಳನ್ನು ಮಾಡುವುದರಿಂದ ಸ್ವಹಿತ ಪರಹಿತಗಳೆರಡೂ ಸಾಧಿಸುವುದೋ ಅದನ್ನು ಯಜ್ಞವೆನ್ನುವರು.

**ತಪ:** ಆಧ್ಯಾತ್ಮಿಕ ಪ್ರಗತಿಗಾಗಿ ಶ್ರಮಿಸುವುದು. ಯಾವುದನ್ನು ಸಹಿಸಲು ಸಾಧ್ಯವೋ ಅದು.

**ಧ್ಯಾನ:** ಮನೋವೃತ್ತಿಗಳನ್ನು ಸಂಸಾರದಿಂದ ಕಿತ್ತು ರಾಮನಾಮದ ಮೇಲೆ ಕೇಂದ್ರೀಕರಿಸುವುದು.

**ತ್ಯಾಗ:** ವಿಕಾರ, ವಿಷಯಾಸಕ್ತಿ, ಮುಂತಾದವುಗಳನ್ನು ತ್ಯಜಿಸುವುದು.

ಯಜ್ಞ, ಧ್ಯಾನ, ತಪ ಇವು ಸಾಧಕರನ್ನು ಪುನೀತಗೊಳಿಸುವ ಕ್ರಿಯೆಯಾಗಿದೆ.

ತ್ಯಾಗ ಶಬ್ದದ ಅರ್ಥ ಅಹಂಕಾರ, ಫಲಾಪೇಕ್ಷೆಗಳನ್ನು ತ್ಯಜಿಸುವುದಾಗಿದೆ. ಉಪಯುಕ್ತ ವಸ್ತುಗಳ ಸಮರ್ಪಕ ಧ್ಯಾನವನ್ನು ತ್ಯಾಗ ಎನ್ನಲಾಗುತ್ತದೆ.

**ವೈರಾಗ್ಯ:** ಇಹ ಮತ್ತು ಪರಲೋಕಕ್ಕೆ ಸಂಬಂಧಿಸಿದ ಸಂಬಂಧಗಳನ್ನು ಸರ್ವಥಾ ಉಪೇಕ್ಷಿಸುವುದು.

**ರಾಮ್ ಜಾಪ್ ಸಬ್ ಸಂಯಮ್ ಸಾಧನ್**
**ರಾಮ್ ಜಾಪ್ ಹೈ ಕರ್ಮ್ ಆರಾಧನ್**
**ರಾಮ್ ಜಾಪ್ ಹೈ ಪರಮ್ ಅಭ್ಯಾಸ್**
**ಸಿಮರೊ ರಾಮ್ ನಾಮ್ ಸುಖ್ ರಾಸ್** ॥ 31 ॥

ರಾಮನಾಮದ ಸ್ಮರಣೆ, ಜಪದಲ್ಲಿ ಮನಸ್ಸಿನ ಸಂಯಮವನ್ನು ಕಾಪಾಡುವ, ಇಂದ್ರಿಯ ನಿಗ್ರಹಕ್ಕೆ ನೆರವಾಗುವ ಎಲ್ಲಸಾಧನಗಳೂ ಅಡಕವಾಗಿವೆ. ಮನಸ್ಸಿನ ಸಂಯಮವನ್ನು ಕಾಪಾಡಲು ರಾಮನಾಮ ಏಕಮಾತ್ರ ಅಭ್ಯಾಸವಾಗಿದೆ. ರಾಮ ನಾಮದಲ್ಲಿ ಪರಮೇಶ್ವರನ ಆರಾಧನೆಯ ಎಲ್ಲಾ ವಿಧಿಗಳೂ ಅಡಕವಾಗಿವೆ. ಜಪ ಹಾಗು ಧ್ಯಾನಕ್ಕೆ

ರಾಮನಾಮವು ಸರ್ವೋತ್ತಮ, ಸಂಪೂರ್ಣ ಸಾಧನವಾಗಿದೆ. ಆದ್ದರಿಂದ ಸುಖಸಂಚಯಕ್ಕಾಗಿ ರಾಮನಾಮವನ್ನು ಧ್ಯಾನಿಸಿ ಸ್ಮರಿಸಿರಿ.

**ಸಂಯಮ :** ಒಂದೇ ಧ್ಯೇಯದ ಮೇಲೆ ಧಾರಣಾ, ಧ್ಯಾನ ಹಾಗೂ ಸಮಾಧಿಯನ್ನು ಕೇಂದ್ರೀಕರಿಸುವುದು ಸಮಾಧಿಯ ಸಾಧನವಾಗಿದೆ.

**ಅಭ್ಯಾಸ :** ನಿತ್ಯ ನಿರಂತರವಾಗಿ ಜಪ, ಧ್ಯಾನ ಇತ್ಯಾದಿಗಳನ್ನು ಪುನಃ ಪುನಃ ಮಾಡುವುದೇ ಅಭ್ಯಾಸವಾಗಿದೆ.

**ಆರಾಧನಾ :** ಪ್ರಭುವಿನ ಮಹಿಮೆ ಹಾಗು ಅವನ ಗುಣಗಾನ ಮಾಡುವುದಾಗಿದೆ.

**ರಾಮ್ ಜಾಪ್ ಕಹಿ ಊಂಚೀ ಕರಣಿ**
**ಬಾಧಾ ವಿಘ್ನ್ ಬಹು ದುಃಖ್ ಹರಣಿ**
**ರಾಮ್ ರಾಮ್ ಮಹಾ ಮಂತ್ರ್ ಜಪನಾ**
**ಹೈ ಸುವ್ರತ್ ನೇಮ್ ತಪ್ ತಾಪನಾ** ॥ 32 ॥

ರಾಮನಾಮದ ಸ್ಮರಣೆ ಜಪವನ್ನು ಶ್ರೇಷ್ಠವಾದ ಅಲೌಕಿಕ ಮಾರ್ಗವೆಂದು ಪರಿಗಣಿಸಲಾಗಿದೆ. ಇದು ಅಡೆತಡೆಗಳನ್ನು, ವಿರೋಧಗಳನ್ನು, ದುಃಖಗಳ ಸಮೂಹವನ್ನು ದೂರ ಮಾಡುವಂಥದ್ದಾಗಿದೆ. ಮಹಾನ್ ಮಂತ್ರವಾದ ರಾಮನಾಮದ ಸ್ಮರಣೆ ಪುಣ್ಯ ಸಂಕಲ್ಪವಾಗಿದೆ. ಒಳ್ಳೆಯ ಅಭ್ಯಾಸವಾಗಿದ್ದು ಉಚ್ಚತಮ ತಪವಾಗಿದೆ.

**ರಾಮ್ ಜಾಪ್ ಹೈ ಸರಲ್ ಸಮಾಧಿ**
**ಹರೇ ಸಬ್ ಆಧಿ ವ್ಯಾಧಿ ಉಪಾಧಿ**
**ಋದ್ಧಿ ಸಿದ್ಧಿ ಔರ್ ನವ್ ನಿಧಾನ್**
**ದಾತಾ ರಾಮ್ ಹೈ ಸಬ್ ಸುಖ್ ಖಾನ್** ॥ 33 ॥

ರಾಮನಾಮದ ಸ್ಮರಣೆಯು ಸಹಜ ಸಮಾಧಿಯಾಗಿದೆ. ಮಾನಸಿಕ, ಶಾರೀರಿಕ ರೋಗಗಳೇ ಇರಲಿ, ಇತರರ ಆರೋಪವೇ ಆಗಿರಲಿ, ದೈವಿ ಸಂಕಟಗಳೇ ಇರಲಿ, ಅವೆಲ್ಲವನ್ನು ದೂರಮಾಡುವಂಥದ್ದಾಗಿದೆ. ರಾಮನಾಮವು ನವನಿಧಿಯ, ಸರ್ವಸುಖಗಳ ಭಂಡಾರವಾಗಿದ್ದು, ಆಧ್ಯಾತ್ಮಿಕ ಶಕ್ತಿಗಳ ಆಗರವಾಗಿದೆ.

ಋದ್ಧಿ ಸಿದ್ಧಿ: ಸಮೃದ್ಧಿ, ಸಫಲತೆಯ ಅಷ್ಟಸಿದ್ಧಿಗಳು.

**ರಾಮ್ ರಾಮ್ ಚಿಂತನ್ ಸುವಿಚಾರ್**
**ರಾಮ್ ರಾಮ್ ಜಪ್ ನಿಶ್ಚಯ್ ಧಾರ್**
**ರಾಮ್ ರಾಮ್ ಶ್ರೀ ರಾಮ್ ಧ್ಯಾನಾ**
**ಹೈ ಪರಮ್ ಪದ್ ಅಮೃತ್ ಪಾನಾ ॥ 34 ॥**

ರಾಮನಾಮದ ಮನಸ್ಸನ್ನು ನೆಲೆನಿಲ್ಲಿಸುವುದು ಸುವಿಚಾರವಾಗಿದೆ. ರಾಮನಾಮದ ಸ್ಮರಣೆಯಲ್ಲೇ ತಲ್ಲೀನನಾಗಿ ಸದಾಕಾಲವೂ ಭಗವದ್ ಚಿಂತನೆಯ ಸ್ಫುರಣವಾಗುವುದು ಉದಾತ್ತ ಸ್ಥಿತಿಯಾಗಿದೆ. ಶ್ರೀರಾಮನಾಮದ ಸ್ಮರಣೆ ರಾಮನನ್ನು ಧ್ಯಾನಿಸುವ ವಿಧಿಯಾಗಿದೆ. ಆದ್ದರಿಂದ ಪರಮಪದವೆಂಬ ಅಮೃತವನ್ನು ಪಡೆಯಲು ದೃಢ ಸಂಕಲ್ಪದಿಂದ ಶ್ರೀರಾಮನನ್ನು ಸ್ಮರಿಸಿರಿ.

ಪರಮಪದ: ಬ್ರಹ್ಮಧಾಮ. ಯಾವುದು ಸ್ವಯಂ ಪ್ರಕಾಶವಾಗಿದ್ದು, ಎಲ್ಲಿ ಸೂರ್ಯ ಚಂದ್ರ ಅಗ್ನಿ ಪ್ರಕಾಶ ನೀಡುವುದಿಲ್ಲವೋ, ಎಲ್ಲಿಂದ ಜೀವ ಪುನಃ ಹಿಂದಿರುಗುವುದಿಲ್ಲವೋ ಅದು ಪರಮಧಾಮವಾಗಿದೆ. ಯಾವುದು ದುಃಖ ಜರಾ, ಮರಣರಹಿತವಾಗಿದೆಯೋ, ಸದಾ ಪರಮಾನಂದ ಎಲ್ಲಿ ದೊರಕುವುದೋ ಅದು ಪರಮಪದವಾಗಿದೆ.

ರಾಮ್ ರಾಮ್ ಶ್ರೀ ರಾಮ್ ಹರಿ
ಸಹಜ್ ಪರಮ್ ಹೈ ಯೋಗ್
ರಾಮ್ ರಾಮ್ ಶ್ರೀ ರಾಮ್ ಜಪ್
ದಾತಾ ಅಮೃತ್ ಭೋಗ್ || 35 ||

ಶ್ರೀ ರಾಮನ ನಾಮಸ್ಮರಣೆ, ಜಪ (ಹರಿನಾಮ ಸ್ಮರಣೆಯು) ನಮ್ಮನ್ನು ಅನಾಯಾಸವಾಗಿ, ಪ್ರಭುವಿನೊಟ್ಟಿಗೆ ಮಿಲನಗೊಳಿಸುವ ಸಾಧನವಾಗಿದೆ. ಆದ್ದರಿಂದ ರಾಮನಾಮದ ಸ್ಮರಣೆ ಮಾಡಿರಿ. ಅದು ಸೇವೆಗೆ ಯೋಗ್ಯವಾಗಿದ್ದು ಅಮೃತ ನೀಡುವುದಾಗಿದೆ.

ನಾಮ್ ಚಿಂತಾಮಣಿ ರತ್ನ್ ಅಮೋಲ್
ರಾಮ್ ನಾಮ್ ಮಹಿಮಾ ಅನಮೋಲ್
ಅತುಲ್ ಪ್ರಭಾವ್ ಅತಿ ಪ್ರತಾಪ್
ರಾಮ್ ನಾಮ್ ಕಹಾ ತಾರಕ್ ಜಾಪ್ || 36 ||

ಶ್ರೀ ರಾಮನಾಮದ ಮಹಾನತೆ ಬಹಳ ಬೆಲೆಯುಳ್ಳದ್ದಾಗಿದೆ. ರಾಮನಾಮವು ಅನರ್ಘ್ಯ ರತ್ನದಂತಿದೆ. ಅದರ ಬೆಲೆ ಕಟ್ಟಲಾಗಲಿ, ಅಳೆಯುವುದಾಗಲಿ ಮಾಡಲು ಸಾಧ್ಯವಿಲ್ಲ. ರಾಮನಾಮವು ಅತಿ ಪ್ರಭಾವಶಾಲಿಯಾಗಿದ್ದು, ಅದರ ಪ್ರಭಾವವನ್ನು ತುಲನೆ ಮಾಡಲಾಗುವುದಿಲ್ಲ. ರಾಮನಾಮವು ಮುಕ್ತಿದಾಯಕವಾಗಿದ್ದು ಉದ್ಧಾರಕ ಜಪವಾಗಿದೆ.

ಬೀಜ್ ಅಕ್ಷರ್ ಮಹಾ ಶಕ್ತಿ ಕೋಶ್
ರಾಮ್ ರಾಮ್ ಜಪ್ ಶುಭ್ ಸಂತೋಷ್
ರಾಮ್ ರಾಮ್ ಶ್ರೀ ರಾಮ್ ರಾಮ್ ಮಂತ್ರ್
ತಂತ್ರ್ ಬೀಜ್ ಪರಾತ್ಪರ್ ಯಂತ್ರ್ || 37 ||

ರಾಮನಾಮದ ಮೂಲಾಕ್ಷರವು ಮಹಾನ್ ಶಕ್ತಿಯ ಕೋಶವಾಗಿದೆ. ರಾಮನಾಮದ ಜಪವು ಶುಭಪ್ರದವಾಗಿದ್ದು, ಸಂತೋಷದಾಯಕವಾಗಿದೆ. ಸರ್ವೋತ್ಕೃಷ್ಟ ರಕ್ಷಾಕವಚದಂತಿರುವ ಶ್ರೀರಾಮ ನಾಮ ಮಂತ್ರವು ತಾಂತ್ರಿಕ ವಿದ್ಯೆಗೂ ಮೂಲವಾಗಿದೆ. ಇದಕ್ಕೆ ಮಿಗಿಲಾದ ಬೇರಿನ್ಯಾವ ತಂತ್ರ ಮಂತ್ರಗಳೂ ಇಲ್ಲ. ಶ್ರೀ ರಾಮನಾಮವು ಮಂತ್ರವಷ್ಟೇ ಅಲ್ಲ, ಉಚ್ಚತಮ ತಂತ್ರವೂ ಆಗಿದೆ. ರಾಮನಾಮವು ಅಸಾಧ್ಯವಾದ ಶ್ರೀ ರಾಮ ಸಾನಿಧ್ಯವನ್ನು ಪ್ರಾಪ್ತಗೊಳಿಸುವಂತದ್ದಾಗಿದೆ.

**ತಂತ್ರ :** ತಾಂತ್ರಿಕ ವಿದ್ಯೆಯ ಸಿದ್ಧಾಂತ.

**ಮಂತ್ರ :** ಸಾಧನೆಯ ವಿಶೇಷ ವಿಧಿಯಾಗಿದೆ.

**ಯಂತ್ರ :** ತಾಯಿತ, ಸಿದ್ಧ ಮಂತ್ರದ ಮೂಲಕ ಕಾರ್ಯಸಿದ್ಧಿಸುವ ರೀತಿ.

**ಬೀಜಾಕ್ಷರ್ ಪದ್ ಪದ್ಮ್ ಪ್ರಕಾಶೆ**
**ರಾಮ್ ರಾಮ್ ಜಪ್ ದೋಷ್ ವಿನಾಶೆ**
**ಕುಂಡಲಿನೀ ಬೋಧೆ ಸುಷುಮ್ನಾ ಖೋಲೆ**
**ರಾಮ್ ಮಂತ್ರ್ ಅಮೃತ್ ರಸ್ ಘೋಲೆ || 38 ||**

ರಾಮನಾಮ ಜಪವು, ಮೂಲಾಕ್ಷರದೊಳಗೆ ಸ್ಥಿರವಾಗಿರುವ ಕಮಲ ಚಕ್ರಗಳನ್ನು ಅರಳಿಸುವುದು, ದುರ್ಗುಣಗಳನ್ನು ಹಾಗೂ ದೋಷಗಳನ್ನು ನಿವಾರಿಸುವುದು. ರಾಮನಾಮದ ಜಪವು ಸುಷಮ್ನಾ ನಾಡಿಯನ್ನು ತೆರೆದು, ಅಮೃತರೂಪಿ ರಸವನ್ನು ಅದರೊಳಗೆ ತುಂಬಿ ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸುವುದು. ಕುಂಡಲಿನೀ ಸರ್ಪಾಕಾರದ ಸುಷುಪ್ತ ಶಕ್ತಿ, ಮೂಲಾಧಾರ ಚಕ್ರದಲ್ಲಿ ಸ್ಥಿತವಾಗಿರುವ ಎಲ್ಲಕ್ಕಿಂತ ಕೆಳಗಿನ ಸ್ಥರದಲ್ಲಿರುವುದು.

ಸುಷುಮ್ನ ಕಮಲನಾಳದಲ್ಲಿ ಇಂಗಲ–ಪಿಂಗಲದ ಮಧ್ಯದಲ್ಲಿ ಸ್ಥಿತವಾಗಿದ್ದು ಮಧ್ಯನಾಡಿಯಲ್ಲಿ ಕುಂಡಲಿನಿ ಜಾಗೃತಗೊಂಡು, ಮೇಲಿನ ಚಕ್ರದೆಡೆಗೆ ಸಾಗುವುದು.

**ಉಪಜೇ ನಾದ್ ಸಹಜ್ ಬಹು ಭಾಂತ್**<br>
**ಅಜಪಾ ಜಾಪ್ ಭೀತರ್ ಹೊ ಶಾಂತ್**<br>
**ರಾಮ್ ರಾಮ್ ಪದ್ ಶಕ್ತಿ ಜಗಾವೆ**<br>
**ರಾಮ್ ರಾಮ್ ಧುನ್ ಜಭಿ ರಮಾವೆ** ॥ 39 ॥

ರಾಮನಾಮದ ಜಪದಿಂದ ಅಂತರ್ಯವನ್ನು ಶಾಂತಗೊಳಿಸುವ ಅನೇಕ ಪ್ರಕಾರದ ಧ್ವನಿಗಳು ಅನಾಯಾಸವಾಗಿಯೇ ಉದ್ಭವವಾಗಿ ಬಿಡುತ್ತವೆ. ಸಲೀಸಾಗಿ ನಿರಂತರ ಜಪ ಆರಂಭವಾಗಿ ಬಿಡುತ್ತದೆ. ಯಾವಾಗ ಮನಸ್ಸು ರಾಮನಾಮದ ಗುಂಗಿನಲ್ಲಿ ಮುದಗೊಳ್ಳುವುದೋ, ಆಗ ರಾಮನಾಮದ ಜಪವು ಆಂತರಿಕ ಶಕ್ತಿಗಳನ್ನು ಜಾಗೃತಗೊಳಿಸುವುದು.

ನಾದ : ಸಮಾಧಿ ಅವಸ್ಥೆಯಲ್ಲಿ ಕೇಳಿಬರುವ ಸೂಕ್ಷ್ಮಶಬ್ದ.

**ರಾಮ್ ನಾಮ್ ಜಬ್ ಜಗೆ ಅಭಂಗ್**<br>
**ಚೇತನ್ ಭಾವ್ ಜಗೆ ಸುಖ್ ಸಂಗ್**<br>
**ಗ್ರಂಥಿ ಅವಿದ್ಯಾ ಟೂಟೆ ಭಾರಿ**<br>
**ರಾಮ್ ಲೀಲಾ ಕಿ ಖಿಲೇ ಫುಲವಾರಿ** ॥ 40 ॥

ನಿರಂತರವಾಗಿ ಅವಿರತವಾಗಿ ರಾಮನಾಮದ ತರಂಗಗಳು ಮನದೊಳಗಿದ್ದಾಗ ನಾನು ಆತ್ಮನಾಗಿದ್ದೇನೆ ಎಂಬ ಚೈತನ್ಯ ಭಾವನೆ ಪರಮಾನಂದ ಪೂರ್ವಕವಾಗಿ, ಸುಖಸಹಿತವಾಗಿ ಜಾಗೃತಗೊಳ್ಳುವುದು. ಇದರಿಂದ ನಾನು ದೇಹವಾಗಿದ್ದೇನೆ ಎಂಬ ಅವಿದ್ಯೆಯ ಗಂಟುಗಳು ಬಿಚ್ಚಲ್ಪಟ್ಟು

ರಾಮ ನಾಮದ ಪ್ರಕಾಶದಿಂದ ಅಜ್ಞಾನದ ಅಂಧಕಾರವು ದೂರವಾಗಿ ಬಿಡುವುದು. ಆಗ ರಾಮಲೀಲಾರೂಪಿ ಹೂವುಗಳು ಅರಳುವುವು.

**ಪತಿತ್ ಪಾವನ್ .ಪರಮ್ ಪಾಠ್**
**ರಾಮ್ ರಾಮ್ ಜಪ್ ಯಾಗ್**
**ಸಫಲ್ ಸಿದ್ಧಿ ಕರ್ ಸಾಧನಾ**
**ರಾಮ್ ನಾಮ್ ಅನುರಾಗ್ ॥ 41 ॥**

ರಾಮನಾಮದ ನಿರಂತರ ಜಪವು ಯಜ್ಞವಾಗಿದೆ. ಈ ಯಜ್ಞ ಪರಮ ಅಧ್ಯಯನವಾಗಿದ್ದು (ಸರ್ವೋಚ್ಚ ಪಠ್ಯ ಸಾಮಗ್ರಿ) ಪತಿತರನ್ನು ಪಾವನಗೊಳಿಸುವುದಾಗಿದೆ. ರಾಮನಾಮ ಜಪವು ಪ್ರೀತಿ ಸಾಧನೆಯನ್ನು ಸಫಲಪೂರ್ವಕವಾಗಿ ಸಂಪನ್ನಗೊಳಿಸುವುದು.

**ತೀನ್ ಲೋಕ್ ಕಾ ಸಮಜಿಯೇ ಸಾರ್**
**ರಾಮ್ ನಾಮ್ ಸಬ್ ಹೀ ಸುಖಕಾರ್**
**ರಾಮ್ ನಾಮ್ ಕಿ ಬಹುತ್ ಬಡಾಯೀ**
**ವೇದ್ ಪುರಾಣ್ ಮುನಿ ಜನ್ ಗಾಯೀ ॥ 42 ॥**

ಸುಖಪ್ರದವಾದ ರಾಮನಾಮವು ಇಡೀ ವಿಶ್ವದ ಆತ್ಮವಾಗಿದೆ, ತತ್ತ್ವವಾಗಿದೆ ಎಂಬುದನ್ನು ಅರಿಯಬೇಕು. ರಾಮನಾಮದ ಮಹಿಮೆಯನ್ನು, ಪ್ರತಾಪವನ್ನು, ವೇದ ಪುರಾಣ ಹಾಗು ಋಷಿಗಳು ಮನಃಪೂರ್ವಕವಾಗಿ ಕೊಂಡಾಡಿದ್ದಾರೆ.

**ತೀನ್ ಲೋಕ್‌ಕಾ ಸಾರ್ :** 'ರ' ಅಗ್ನಿ ಬೀಜ, (ಭೂಲೋಕ ಅಗ್ನಿ ಸ್ಥಾನವಾಗಿದೆ) 'ಅ' ಆದಿತ್ಯ ಬೀಜ (ಸ್ವರ್ಗಲೋಕ ಸೂರ್ಯನ ಸ್ಥಾನವಾಗಿದೆ) 'ಮ' ಚಂದ್ರಬೀಜ (ಚಂದ್ರನ ಸ್ಥಾನವು ಇವೆರಡರ ನಡುವಿನ ಅಂತರಿಕ್ಷವಾಗಿದೆ). ಈ ರೀತಿ ರಾಮನಾಮವು ಮೂರು ಲೋಕಗಳ ಸಾರವಾಗಿದೆ.

ಮುನಿ : ಯಾರು ಮನನದಲ್ಲಿ ಮಗ್ನರಾಗುವರೋ ಅವರು.

**ಯತಿ ಸತಿ ಸಾಧು ಸಂತ್ ಸಯಾನೆ**
**ರಾಮ್ ನಾಮ್ ನಿಶ್ ದಿನ್ ಬಖಾನೆ**
**ತಾಪಸ್ ಯೋಗಿ ಸಿದ್ಧ್ ಋಷಿವರ್**
**ಜಪ್‌ತೆ ರಾಮ್ ರಾಮ್ ಸಬ್ ಸುಖಕರ್ ॥ 43 ॥**

ಯತಿಗಳು, ಸಾಧ್ವಿಗಳು, ಪತಿವ್ರತೆಯರು, ಸಾಧು ಸಂತರು, ಬುದ್ಧಿವಂತರು, ಹಗಲಿರುಳು ರಾಮ ನಾಮದ ಗುಣಗಾನವನ್ನು ಮಾಡುತ್ತಿರುತ್ತಾರೆ. ಸರ್ವ ಸುಖವನ್ನುಂಟುಮಾಡುವ ಶ್ರೀರಾಮ ಜಪವನ್ನು ತಪಸ್ವಿಗಳು, ಯೋಗಿಗಳು, ಸಿದ್ಧರು, ಋಷಿ ಮಹರ್ಷಿಗಳು ಮಾಡುವರು.

**ಯತಿ :** ಯಾರು ಇಂದ್ರಿಯ ಹಾಗೂ ಮನಸ್ಸನ್ನು ನಿಗ್ರಹಿಸುವರೋ ಅವರನ್ನು ಯತಿಗಳೆನ್ನುತ್ತಾರೆ.

**ಸತಿ :** ಪತಿವ್ರತೆ.

**ಸಿದ್ಧ :** ಯಾರು ಆಧ್ಯಾತ್ಮಿಕ ಶಕ್ತಿಯನ್ನು ಪ್ರಾಪ್ತಗೊಳಿಸಿಕೊಂಡಿರುವರೋ ಅವರು.

**ಭಾವನಾ ಭಕ್ತಿ ಭರೆ ಭಜನೀಕ್**
**ಭಜತೆ ರಾಮ್ ನಾಮ್ ರಮಣೀಕ್**
**ಭಜತೆ ಭಕ್ತ್ ಭಾವ್ ಭರ್‌ಪೂರ್**
**ಭ್ರಮ್ ಭಯ್ ಭೇದ್ ಭಾವ್ ಸೆ ದೂರ್ ॥ 44 ॥**

ಅತಿ ಸುಂದರವಾದ ರಾಮನಾಮವನ್ನು ಶ್ರದ್ಧಾ ಭಕ್ತಿಗಳಿಂದ ಭಜನೆ ಮಾಡುವ ಭಕ್ತರು, ಗಾಯನ ಮಾಡುವ ಗಾಯಕರು ಭಜಿಸುವರು. ಭಕ್ತರುಗಳು ಭಾವಪರವಶತೆಯಿಂದ ರಾಮನಾಮದ ಭಜನೆ ಮಾಡು

ವುದರ ಮೂಲಕ ರಾಮನ ಗುಣಗಾನ ಹಾಡುವುದರ ಮೂಲಕ ತಮ್ಮ ಭಯ, ಸಂಶಯ ಹಾಗೂ ಪಕ್ಷಪಾತಗಳಿಂದ ದೂರವಿರುವರು.

ಪೂರ್ಣ್ ಪಂಡಿತ್ ಪುರುಷ್ ಪ್ರಧಾನ್
ಪಾವನ್ ಪರಮ್ ಪಾಠ್ ಹಿ ಮಾನ್
ಕರ್‌ತೆ ರಾಮ್ ರಾಮ್ ಜಪ್ ಧ್ಯಾನ್
ಸುನ್‌ತೆ ರಾಮ್ ಅನಾಹದ್ ತಾನ್ ॥ 45 ॥

ದೊಡ್ಡ ವಿದ್ವಾಂಸರುಗಳು, ಪ್ರಮುಖ ಜನರು, ರಾಮನಾಮದ ಸ್ಮರಣೆಯು ಪರಮ ಪವಿತ್ರವಾದದ್ದೆಂದೂ ಅದು ಎಲ್ಲರನ್ನೂ ಪವಿತ್ರಗೊಳಿಸುವುದೆಂಬುದನ್ನೂ ನಂಬಿ ದಿನನಿತ್ಯ ಜಪ ಹಾಗೂ ಧ್ಯಾನ ಮಾಡುವರು. ಅಂತರ್ಯದಲ್ಲಿ 'ರಾಮ' ಶಬ್ದದ ಸೂಕ್ಷ್ಮ ದಿವ್ಯ ಧ್ವನಿ ಕೇಳಿ ಆನಂದದಿಂದ ಮೈಮರೆಯುವರು.

**ಅನಾಹದ ತಾನ :** ನಾಲಿಗೆಯ ತುದಿಯಲ್ಲಿ ಪ್ರಕಟಗೊಳ್ಳುವ ವಾಣಿ. ವಾಣಿಯನ್ನು ವೈಖರಿ ಎಂದೆನ್ನುವರು. ಕಂಠದಲ್ಲಿ ಮಧ್ಯಮ, ಹೃದಯದಲ್ಲಿ ಪಶ್ಯಂತಿ, ನಾಭಿ ಮಂಡಲದಲ್ಲಿ ಧಾರಾವಾಣಿಯು ಪ್ರಕಟಗೊಳ್ಳುವುದು. ಪಶ್ಯಂತಿಯ ನಾದಕ್ಕೆ ಅನಾಹದ ಅಥವಾ ಅನಹದ ನಾದ ಎಂದು ಕರೆಯುವರು. ಅಜಪಾ ಜಪದಲ್ಲಿ ಈ ನಾದ ಉಂಟಾಗುವುದು.

ಇಸ್‌ಮೆ ಸುರತಿ ಸುರ್ ರಮಾತೆ
ರಾಮ್ ರಾಮ್ ಸ್ವರ್ ಸಾಧ್ ಸಮಾತೆ
ದೇವ್ ದೇವೀಗಣ್ ದೈವ್ ವಿಧಾತಾ
ರಾಮ್ ರಾಮ್ ಭಜತೆ ಗಣತ್ರಾತಾ ॥ 46 ॥

ಪ್ರೇಮಿಗಳು ತಮ್ಮ ಅನುರಕ್ತರಲ್ಲಿ ಒಂದಾಗಿ ಬೆರೆಯುವಂತೆ ರಾಮ ನಾಮದ ಧ್ವನಿಯಲ್ಲಿ ಸಾಧುಗಳು ತಮ್ಮ ದೇವತೆಗಳಲ್ಲಿ ಲೀನರಾಗುವರು. ಅದರಲ್ಲೇ ತಲ್ಲೀನರಾಗಿ ಆನಂದವನ್ನು ಹೊಂದುವರು. ದಿವ್ಯ ಲೋಕದ ನಿವಾಸಿಗಳು, ವಿಶ್ವದ ಸೃಷ್ಟಿಕರ್ತರು ಹಾಗೂ ಜನರಕ್ಷಕರು ಇವರೆಲ್ಲರೂ ರಾಮನಾಮವನ್ನು ಭಜಿಸುತ್ತಾರೆ. ಅಂದರೆ ವೈಷ್ಣವರು, ಶೈವರು, ಶಕ್ತರು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ರಾಮನಾಮವನ್ನು ಭಜಿಸುವರು.

**ಸುರ :** ಇಂದ್ರ ಮೊದಲಾದ ದೇವತೆಗಳು.

**ದೇವ :** ಬ್ರಹ್ಮ, ಶಿವ ಮೊದಲಾದ ದೇವತೆಗಳು.

***ದೇವಿಗಣ :*** ಸರಸ್ವತಿ, ಲಕ್ಷ್ಮಿ, ಪಾರ್ವತಿ.

**ದೈವ :** ದಿವ್ಯಲೋಕವಾಸಿ.

**ವಿಧಾತಾ :** ಸೃಷ್ಟಿಕರ್ತಾ.

***ಗಣತ್ರಾತಾ :*** ಶಿವ, ವಿಷ್ಣು, ಶಕ್ತಿ, ಗಣಪತಿ ಆದಿ.

**ರಾಮ್ ರಾಮ್ ಸುಗುಣೀ ಜನ್ ಗಾತೆ**
**ಸ್ವರ್ ಸಂಗೀತ್ ಸೆ ರಾಮ್ ರಿಜಾತೆ**
**ಕೀರ್ತನ್ ಕಥಾ ಕರ್ತೆ ವಿದ್ವಾನ್**
**ಸಾರ್ ಸರಸ್ ಸಂಗ್ ಸಾಧನವಾನ್ ॥ 47 ॥**

ಸುಗುಣವಂತರು ಶ್ರೀರಾಮನನ್ನು ಪ್ರಸನ್ನಗೊಳಿಸಲು ತಮ್ಮ ಮಧುರ ಸ್ವರದಿಂದ, ಗೀತೆಗಳಿಂದ ರಾಮನಾಮವನ್ನು ಹಾಡುವರು. ವಿದ್ಯಾವಂತರಾದ ಶಾಸ್ತ್ರಜ್ಞರುಗಳು, ಸಾಧಕರುಗಳು, ರಾಮನ ಕೀರ್ತಿಯನ್ನು ಕೊಂಡಾಡುವರು. ರಾಮ ಕಥನವನ್ನು ಮಾಡುವರು. ತತ್ವ ಸಹಿತ ಮಧುರ ಚರ್ಚೆಯನ್ನು ಮಾಡುವರು.

**ಮೋಹಕ್ ಮಂತ್ರ್ ಅತಿ ಮಧುರ್**
**ರಾಮ್ ರಾಮ್ ಜಪ್ ಧ್ಯಾನ್**
**ಹೋತಾ ತೀನೋಂ ಲೋಕ್ ಮೆ**
**ರಾಮ್ ನಾಮ್ ಗುಣ್ ಗಾನ್ ॥ 48 ॥**

ರಾಮನಾಮದ ಸ್ಮರಣೆ ಹಾಗೂ ಜಪ ಅತಿ ಮಧುರವಾಗಿದ್ದು ಅತ್ಯಂತ ಆಕರ್ಷಣೀಯವಾಗಿದೆ. ಮನಸ್ಸನ್ನು ಮುಗ್ಧಗೊಳಿಸುವಂತದ್ದಾಗಿದೆ. ಮೂರು ಲೋಕಗಳಲ್ಲಿಯೂ ರಾಮನಾಮದ ಗುಣಗಾನ, ಆದರ ಯಶೋಗಾನ ನಡೆಯುತ್ತದೆ.

**ಮಿಥ್ಯಾ ಮನ್ ಕಲ್ಪಿತ್ ಮತ್ ಜಾಲ್**
**ಮಿಥ್ಯಾ ಹೈ ಮೋಹ್ ಕುಮದ್ ಬೈತಾಲ್**
**ಮಿಥ್ಯಾ ಮನ್ ಮುಖಿಯಾ ಮನೋರಾಜ್**
**ಸಚ್ಚಾ ಹೈ ರಾಮ್ ನಾಮ್ ಜಪ್ ಕಾಜ್ ॥ 49 ॥**

ಮನಸ್ಸಿನಿಂದ ರಚಿಸಲ್ಪಟ್ಟ ಮನಸ್ಸು ರೂಪಿಸಿದ ಭಿನ್ನ ಭಿನ್ನ ಪಂಥಗಳು ಅಸತ್ಯವಾದದ್ದು, ನಶ್ವರವಾದದ್ದು, ವ್ಯಾಮೋಹ ಅಹಂಕಾರಗಳ ಭೂತವೂ ಅಸತ್ಯವಾದದ್ದು. ಮನಸ್ಸಿಗೆ ಪ್ರಾಶಸ್ತ್ಯ ನೀಡುವ, ಮನಸ್ಸಿನಿಂದ ಅನುಶಾಸಿತ ಗೊಂಡಂತಹ, ಮನಸ್ಸಿನಿಂದ ನಿಯಂತ್ರಿಸಲ್ಪಟ್ಟ ಅರ್ಥಾತ್ ಮನೋರಾಜ್ಯದಲ್ಲಿರುವುದೆಲ್ಲವೂ ಅಸತ್ಯವಾಗಿರುತ್ತದೆ. ಆದರೆ ರಾಮನಾಮದ ಜಪದ ಕಾರ್ಯವೊಂದೇ ಸತ್ಯವಾದದ್ದು.

**ಮಿಥ್ಯಾ ಹೈ ವಾದ್ ವಿವಾದ್ ವಿರೋಧ್**
**ಮಿಥ್ಯಾ ಹೈ ವೈರ್ ನಿಂದಾ ಹಠ್ ಕ್ರೋಧ್**
**ಮಿಥ್ಯಾ ದ್ರೋಹ್ ದುರ್ಗುಣ್ ದುಃಖ್ ಖಾನ್**
**ರಾಮ್ ನಾಮ್ ಜಪ್ ಸತ್ಯ್ ನಿಧಾನ್ ॥ 50 ॥**

ತಮ್ಮ ವಾದವನ್ನು ಮಂಡಿಸುವ ಇತರರ ವಾದವನ್ನು ಖಂಡಿಸುವ ವ್ಯರ್ಥ ವಾದ ವಾದ–ವಿವಾದಗಳು, ತರ್ಕ–ವಿತರ್ಕಗಳು, ಪ್ರತಿಕೂಲ ಗಳು ಅಸತ್ಯದ್ದಾಗಿವೆ. ಶತ್ರುತ್ವ, ಇತರರ ದೋಷಗಳ ವರ್ಣನೆ, ಹಠ ಮಾರಿತನ, ಕ್ರೋಧ, ಕೆಟ್ಟ ಭಾವನೆಗಳು, ಕೆಟ್ಟ ಗುಣಗಳು ಇವೆಲ್ಲವೂ ಅಸತ್ಯದಾಗಿವೆ ಹಾಗೂ ದುಃಖವನ್ನುಂಟುಮಾಡುವುದಾಗಿವೆ. ಕೇವಲ ರಾಮನಾಮವೊಂದೇ ಸತ್ಯದ ಭಂಡಾರವಾಗಿದೆ.

ಸತ್ಯ್ ಮೂಲಕ್ ಹೈ ರಚನಾ ಸಾರಿ
ಸರ್ವ್‌ಸತ್ಯ್ ಪ್ರಭು ರಾಮ್ ಪಸಾರಿ
ಬೀಜ್ ಸೆ ತರು ಮಕಡಿಸೆ ತಾರ್
ಹುವಾ ತ್ಯೋಂ ರಾಮ್ ಸೆ ಜಗ್ ವಿಸ್ತಾರ್ ॥ 51 ॥

ಸೃಷ್ಟಿಯ ಮೂಲ ಸತ್ಯವಾಗಿದೆ. ಇದು ಸರ್ವ ಸತ್ಯಗಳ ಸತ್ಯವಾದ ಪ್ರಭು ಶ್ರೀರಾಮನಿಂದ ವಿಕಸಿತಗೊಂಡದ್ದಾಗಿದೆ. ಅಂದರೆ ಇದನ್ನು ಪ್ರಭು ರಾಮನೇ ಪ್ರಸಾರಮಾಡಿದ್ದಾನೆ. ಬೀಜದಿಂದ ವೃಕ್ಷ ಬೆಳೆಯುವಂತೆ, ಜೇಡನಿಂದ ಎಳೆಗಾಲ ಜಾಲ ತಯಾರಾಗುವಂತೆ, ಇಡೀ ವಿಶ್ವವೇ ಶ್ರೀರಾಮನಿಂದ ವಿಸ್ತೃತಗೊಂಡಿದೆ.

ವಿಶ್ವ್ ವೃಕ್ಷ್ ಕಾ ರಾಮ್ ಹೈ ಮೂಲ್
ಉಸ್ ಕೋ ತೊ ಪ್ರಾಣಿ ಕಭೀ ನ ಭೂಲ್
ಸಾಂಸ್ ಸಾಂಸ್‌ಸೆ ಸಿಮರ್ ಸುಜಾನ್
ರಾಮ್ ರಾಮ್ ಪ್ರಭು ರಾಮ್ ಮಹಾನ್ ॥ 52 ॥

ಶ್ರೀರಾಮ ವಿಶ್ವರೂಪಿ ವೃಕ್ಷದ ಆದಿಮೂಲನಾಗಿದ್ದಾನೆ(ಬೀಜ). ಎಲೈ ಮಾನವನೇ, ಈ ತಥ್ಯವನ್ನು (ಸತ್ಯ) ನೀನು ಎಂದೆಂದಿಗೂ ಮರೆಯದಿರು.

ಎಲ್ಲೈ ಬುದ್ಧಿಜೀವಿಗಳಾ, ನಿಮ್ಮ ಪ್ರತಿಯೊಂದು ಉಸಿರಾಟದ ಜೊತೆಗೂ ಆ ಮಹಾ ಪ್ರಭುವಿನ ಸ್ಮರಣೆ ಮಾಡಿರಿ, ಅವನನ್ನು ಧ್ಯಾನಿಸಿ ಜಪಿಸಿರಿ.

ಲಯ್ ಉತ್ಪತ್ತಿ ಪಾಲನಾ ರೂಪ್
ಶಕ್ತಿ ಚೇತನಾ ಆನಂದ್ ಸ್ವರೂಪ್
ಆದಿ ಅಂತ್ ಔರ್ ಮಧ್ಯ್ ಹೈ ರಾಮ್
ಅಶರಣ್ ಶರಣ್ ಹೈ ರಾಮ್ ವಿಶ್ರಾಮ್ ॥ 53 ॥

ನಿರಾಶ್ರಿತರಿಗೆ ಆಶ್ರಯದಾತನಂತಿದ್ದಾನೆ ರಾಮ. ವಿನಾಶ ಸೃಷ್ಠಿ ಹಾಗೂ ಪರಿಪಾಲನೆ ಇವು ಆತನ ರೂಪವಾಗಿವೆ . ಪರಾಶಕ್ತಿ ಆನಂದ, ಸಚ್ಚಿದಾನಂದ ಇವು ಆತನ ಸ್ವಭಾವ ಪರಿಚಯವಾಗಿವೆ. ಅಂತಹಾ ರಾಮ ಸೃಷ್ಟಿಯ ಆದಿ, ಮಧ್ಯಮ, ಅಂತ್ಯವಾಗಿದ್ದಾನೆ.

ರಾಮ್ ನಾಮ್ ಜಪ್ ಭಾವ್ ಸೆ
ಮೇರೆ ಅಪ್‌ನೆ ಆಪ್
ಪರಮ್ ಪುರುಷ್ ಪಾಲಕ್ ಪ್ರಭು
ಹರ್ತಾ ಪಾಪ್ ತ್ರಿತಾಪ್ ॥ 54 ॥

ಆದ್ದರಿಂದ ಎಲ್ಲೈ ನನ್ನವನೇ, ಶ್ರದ್ಧಾ ಭಕ್ತಿಪೂರ್ವಕವಾಗಿ ರಾಮನನ್ನು ಸ್ಮರಿಸು, ಜಪಿಸು. ರಾಮನು ಎಲ್ಲರಿಗೂ ಸ್ವಾಮಿಯಾಗಿದ್ದಾನೆ, ಪುರುಷೋತ್ತಮನಾಗಿದ್ದಾನೆ. ಎಲ್ಲರ ಪೋಷಣೆಯನ್ನು ಮಾಡುವ ಪೋಷಕನಾಗಿದ್ದು, ತಾಪಗಳನ್ನೂ ಪಾಪಗಳನ್ನೂ ಕಳೆಯುವವನಾಗಿದ್ದಾನೆ. ಹರಣ ಮಾಡುವವನಾಗಿದ್ದಾನೆ.

ರಾಮ್ ನಾಮ್ ಬಿನಾ ವೃಥಾ ವಿಹಾರ್
ಧನ್ ಧಾನ್ಯ್ ಸುಖ್ ಭೋಗ್ ಪಸಾರ್
ವೃಥಾ ಹೈ ಸಬ್ ಸಂಪದ್ ಸಮ್ಮಾನ್
ಹೋವೆ ತನ್ ಯಥಾ ರಹಿತ್ ಪ್ರಾಣ್ ॥ 55 ॥

ರಾಮನಾಮದ ಜಪವಿರದೆ ಎಲ್ಲಾ ರೀತಿಯ ಮನರಂಜನೆ, ಭೋಗಗಳು, ಭೋಗವಸ್ತುಗಳು, ಧನಧಾನ್ಯಗಳು, ಸುಖನೀಡುವಂಥದ್ದೇನೇ ಇರಲಿ; ಅವುಗಳೆಲ್ಲವೂ ಪ್ರಾಣವಿಲ್ಲದ ದೇಹದಂತೆ ನಿಸ್ಸಾರ, ನಿರರ್ಥಕವೆನಿಸುವುವು. ಸಕಲೈಶ್ವರ್ಯಗಳೂ, ಮಾನ ಸಮ್ಮಾನಗಳೂ ವ್ಯರ್ಥವೆನಿಸುವುವು.

ನಾಮ್ ಬಿನಾ ಸಬ್ ನೀರಸ್ ಸ್ವಾದ್
ಜ್ಯೋಂ ಹೊ ಸ್ವರ್ ಬಿನಾ ರಾಗ್ ವಿಷಾದ್
ನಾಮ್ ಬಿನಾ ನಹಿಂ ಸಜೆ ಸಿಂಗಾರ್
ರಾಮ್ ನಾಮ್ ಹೈ ಸಬ್ ರಸ್ ಸಾರ್ ॥ 56 ॥

ರಾಮನಾಮವಿಲ್ಲದಿದ್ದರೆ, ಎಲ್ಲ ಸ್ವಾದವೂ ರಸಹೀನ, ಸಪ್ಪೆ ಎನಿಸುವುದು. ಒಳ್ಳೆ ಸ್ವರವಿಲ್ಲದ ಸಂಗೀತದಂತೆ, ಉದಾಸೀನತೆ ತುಂಬಿದ ಗೀತೆಯಂತಿರುವುದು. ರಾಮನಾಮವಿಲ್ಲದ ಶೃಂಗಾರವೂ ಆಕರ್ಷಕವೆನಿಸದು, ಪ್ರಭಾವಹೀನವೆನಿಸುವುದು. ರಾಮನಾಮವೊಂದೇ ಎಲ್ಲ ರುಚಿಯ (ಸ್ವಾದದ) ಪ್ರಾಣವಾಗಿದೆ, ತಿರುಳಾಗಿದೆ.

ಜಗತ್ ಕಾ ಜೀವನ್ ಜಾನೋ ರಾಮ್
ಜಗ್ ಕೀ ಜ್ಯೋತಿ ಜಾಜ್ವಲ್ಯಮಾನ್
ರಾಮ್ ನಾಮ್ ಬಿನಾ ಮೋಹಿನೀ ಮಾಯಾ
ಜೀವನ್ ಹೀನ್ ಯಥಾ ತನ್ ಛಾಯಾ ॥ 57 ॥

ಇಡೀ ವಿಶ್ವದ ಆತ್ಮಗಳಿರಾ, ಶ್ರೀರಾಮನು ಸಂಸಾರದ ಜಾಜ್ವಲ್ಯಮಾನ ಜ್ಯೋತಿಯಾಗಿದ್ದಾನೆಂಬುದನ್ನು ಅರಿಯಿರಿ. ಯಾವ ರೀತಿ ದೇಹವಿರದೆ ಅದರ ನೆರಳಿರುವುದಿಲ್ಲವೋ, ಅದೇ ರೀತಿ ರಾಮನಾಮವಿಲ್ಲದೆ ರಾಮನ ಭ್ರಮೆ ಹುಟ್ಟಿಸುವ ಆ ಶಕ್ತಿ ಮಾಯೆಯೂ ಇರುವುದಿಲ್ಲ, ಮಾಯೆ

46

ಯಿಂದಲೇ ಸೃಷ್ಟಿಕಾರ್ಯವೂ ನಡೆಯುವುದು. ಅದಿಲ್ಲದಿದ್ದರೆ ಜೀವನ ಶೂನ್ಯ ಹಾಗೂ ನಿಷ್ಪ್ರಾಣವೆನಿಸುವುದು.

ಸೂನಾ ಸಮಜಿಯೇ ಸಭ್ ಸಂಸಾರ್
ಜಹಾಂ ನಹಿಂ ರಾಮ್ ನಾಮ್ ಸಂಚಾರ್
ಸೂನಾ ಜಾನಿಯೇ ಜ್ಞಾನ್ ವಿವೇಕ್
ಜಿಸ್ ಮೆ ರಾಮ್ ನಾಮ್ ನಹಿಂ ಏಕ್ ॥ 58 ॥

ರಾಮನಾಮದ ವ್ಯಾಪ್ತಿಯಿಲ್ಲದೆ ಇಡೀ ಸಂಸಾರ ಬರಡೆನಿಸುವುದು. ರಾಮನಾಮದ ಬಗೆಗೆ ಅರಿವಿರದ ಜ್ಞಾನ ಮತ್ತು ವಿವೇಕವೂ ಕೂಡಾ ಟೊಳ್ಳಾಗಿರುವುದು. ರಾಮನಾಮ ರಹಿತವಾದದ್ದೆಲ್ಲ ನಿಸ್ಸಾರ.

ಸೂನೆ ಗ್ರಂಥ್ ಪಂಥ್ ಮತ್ ಪೋಥೇ
ಬನೆ ಜೊ ರಾಮ್ ನಾಮ್ ಬಿನ್ ಥೋಥೇ
ರಾಮ್ ನಾಮ್ ಬಿನ್ ವಾದ್ ವಿಚಾರ್
ಭಾರಿ ಭ್ರಮ್ ಕಾ ಕರೆ ಪ್ರಚಾರ್ ॥ 59 ॥

ಸರ್ವಧರ್ಮಗ್ರಂಥಗಳು, ಶಾಸ್ತ್ರಗಳು, ಸಂಪ್ರದಾಯಗಳು, ಧಾರ್ಮಿಕ ಸಿದ್ಧಾಂತಗಳು, ಹಾಗೂ ಬೃಹತ್ ಪುಸ್ತಕಗಳು ರಾಮ ನಾಮದ ಉಲ್ಲೇಖವನ್ನು ಒಳಗೊಂಡಿರದಿದ್ದರೆ, ಅವು ಕೇವಲ ಕಾಗದದ ಕಂತೆಗಳೆಂದೆನಿಸುವುವು. ರಾಮನಾಮದ ವಿಚಾರವಿಲ್ಲದ ಚರ್ಚೆ ತರ್ಕ, ಚಿಂತನೆಗಳೆಲ್ಲ ದೊಡ್ಡ ಭ್ರಾಂತಿಯನ್ನು ಪ್ರಸಾರ ಮಾಡುವುದಾಗಿವೆ.

ರಾಮ್ ನಾಮ್ ದೀಪಕ್ ಬಿನಾ
ಜನ್ ಮನ್ ಮೇ ಅಂಧೇರ್
ರಹೇ ಇಸ್ ಸೆ ಹೇ ಮಮ್ ಮನ್
ನಾಮ್ ಸುಮಾಲಾ ಫೇರ್ ॥ 60 ॥

ರಾಮನಾಮ ರೂಪಿ ದೀಪವಿಲ್ಲದಿದ್ದರೆ ಮನದೊಳಗೆ ಅಂಧಕಾರ ಕವಿದು ಬಿಡುತ್ತದೆ. ಆದ್ದರಿಂದ ನನ್ನ ಮನವೇ, ನೀನು ರಾಮನಾಮದ ಸುಂದರ ಮಾಲೆಯನ್ನು ಧರಿಸಿಕೋ, ಸದಾ ರಾಮನಾಮವನ್ನು ಧ್ಯಾನಿಸು.

**ರಾಮ್ ರಾಮ್ ಭಜ್ ಕರ್ ಶ್ರೀರಾಮ್**
**ಕರಿಯೆ ನಿತ್ಯ್ ಹೀ ಉತ್ತಮ್ ಕಾಮ್**
**ಜಿತನೆ ಕರ್ತವ್ಯ್ ಕರ್ಮ್ ಕಲಾಪ್**
**ಕರಿಯೆ ರಾಮ್ ರಾಮ್ ಕರ್ ಜಾಪ್** ॥ 61 ॥

ರಾಮನಾಮದ ಜಪ ಹಾಗೂ ಸ್ಮರಣೆಯನ್ನು ನಿತ್ಯವೂ ಮಾಡಿ, ಇದು ಶ್ರೇಷ್ಠವಾದ ಸುಕೃತ ಸತ್ಕರ್ಮವಾಗಿದೆ. ರಾಮನಾಮದ ಸ್ಮರಣೆ, ಚಿಂತನೆ, ಧ್ಯಾನಗಳೇ ಸರ್ವಶ್ರೇಷ್ಠ, ಸರ್ವೋತ್ತಮ ಕಾರ್ಯವಾಗಿವೆ. ಆದ್ದರಿಂದ ದಿನನಿತ್ಯ ಇಂತಹ ಸರ್ವೋಚ್ಚ ಕರ್ಮವನ್ನು ಮಾಡಿರಿ. ದೈನಂದಿನ ಕೆಲಸ ಕಾರ್ಯಗಳನ್ನು ಮಾಡುವಾಗಲೂ, ರಾಮನಾಮವನ್ನು ಜಪಿಸುತ್ತಿರಿ.

**ಕರಿಯೆ ಗಮನಾಗಮ್ ಕೆ ಕಾಲ್**
**ರಾಮ್ ಜಾಪ್ ಜೊ ಕರತಾ ನಿಹಾಲ್**
**ಸೋತೆ ಜಗತೆ ಸಬ್ ದಿನ್ ಯಾಮ್**
**ಜಪಿಯೆ ರಾಮ್ ರಾಮ್ ಅಭಿರಾಮ್** ॥ 62 ॥

ಸಂತೋಷ ಹಾಗೂ ಪ್ರಸನ್ನತೆಯನ್ನು ಕೊಡುವಂಥ ರಾಮನಾಮವನ್ನು ಅತ್ತಿಂದಿತ್ತ ನಡೆದಾಡುವಾಗಲೂ ಸ್ಮರಿಸಿ ಜಪಿಸಿರಿ, ಹಗಲೂ ರಾತ್ರಿ ಪ್ರತಿಕ್ಷಣ ದಲ್ಲೂ, ಎಚ್ಚರವಿರುವಾಗಲಾಗಲಿ, ನಿದ್ದೆಯಲ್ಲಿರುವಾಗಲಾಗಲಿ, ಎಂಟೂ ಪ್ರಹರಗಳಲ್ಲೂ, ಸುಂದರ ಮನೋಹರ ರಾಮನಾಮವನ್ನು ಜಪಿಸುತ್ತಲೇ ಇರಿ.

ಜಪತೆ ರಾಮ್ ನಾಮ್ ಮಹಾ ಮಾಲಾ
ಲಗತಾ ನರಕ್ ದ್ವಾರ್ ಪೈ ತಾಲಾ
ಜಪತೆ ರಾಮ್ ರಾಮ್ ಜಪ್ ಪಾಠ್
ಜಲ್‌ತೆ ಕರ್ಮಬಂಧ್ ಯಥಾ ಕಾಠ್ ॥ 63 ॥

ರಾಮನಾಮದ ಮಹಾಮಾಲೆಯನ್ನು ಜಪಿಸುತ್ತಿರುವಂತೆಯೇ, ನರಕದ ಬಾಗಿಲುಗಳಿಗೆ ಬೀಗ ಹಾಕಲ್ಪಡುವುದು. ಅಂದರೆ ರಾಮ ನಾಮವನ್ನು ಭಜಿಸುವ ಭಕ್ತನಿಗೆ ನರಕದಲ್ಲಿ ಪ್ರವೇಶವಿರುವುದಿಲ್ಲ. ರಾಮನಾಮವನ್ನು ಮೇಲಿಂದ ಮೇಲೆ ಜಪಿಸುವುದರಿಂದ ಕರ್ಮದಿಂದ ಅರ್ಜಿತವಾದ ಬಂಧನಗಳೆಲ್ಲವೂ ಕಟ್ಟಿಗೆ ಉರಿದಂತೆ ಸುಟ್ಟು ಭಸ್ಮವಾಗಿ ಬಿಡುವುವು.

**ಬಂಧನ :** ಸ್ವಾರ್ಥ, ಅಹಂಕಾರ, ದ್ವೇಷ, ಈರ್ಷೆ, ಪ್ರೇರಿತ ಕರ್ಮಗಳು ಬಂಧಿಸುತ್ತವೆ.

ತಾನ್ ಜಬ್ ರಾಮ್ ನಾಮ್ ಕಿ ಟೂಟೆ
ಭಾಂಡಾ ಭರಾ ಅಭಾಗ್ಯ ಭಯ್ ಫೂಟೆ
ಮನಕಾ ಹೈ ರಾಮ್ ನಾಮ್ ಕಾ ಐಸಾ
ಚಿಂತಾ ಮಣಿ ಪಾರಸ್ ಮಣಿ ಜೈಸಾ ॥ 64 ॥

ಅಂತರ್ಯದಲ್ಲಿ ನಿರಂತರವಾಗಿ ರಾಮನಾಮದ ಧ್ವನಿ ಮೊಳಗಿದಾಗ, ಭಯ ಹಾಗೂ ದುರ್ದೆಸೆ ತುಂಬಿದ ಪಾತ್ರೆಯೂ ಕೂಡಾ ನುಚ್ಚು ನೂರಾಗಿ ಬಿಡುವುದು. ರಾಮನಾಮವು ಪಾರಸಮಣಿ ಅಥವಾ ಚಿಂತಾಮಣಿಯಂತಿದೆ.

**ಚಿಂತಾಮಣಿ:** ಅನರ್ಘ್ಯವಾದ ಕಲ್ಲು. ಇದರ ಸ್ಪರ್ಶಮಾತ್ರದಿಂದಲೇ ಕಬ್ಬಿಣವೂ ಕೂಡಾ ಬಂಗಾರವಾಗಿ ಮಾರ್ಪಾಡಾಗಿ ಬಿಡುವುದು.

ರಾಮ್ ನಾಮ್ ಸುಧಾ ರಸ್ ಸಾಗರ್
ರಾಮ್ ನಾಮ್ ಜ್ಞಾನ್ ಗುಣ್ ಆಗರ್
ರಾಮ್ ನಾಮ್ ಶ್ರೀ ರಾಮ್ ಮಹಾರಾಜ್
ಭವ್ ಸಿಂಧು ಮೆ ಹೈ ಅತುಲ್ ಜಹಾಜ್ ॥ 65 ॥

ರಾಮನಾಮ ಅಮೃತ ಸಾಗರವಾಗಿದೆ. ಆತ್ಮವಿದ್ಯೆಹಾಗೂ ಸದ್ಗುಣಗಳ ಭಂಡಾರವಾಗಿದೆ. ಸಂಸಾರವೆಂಬ ಸಾಗರದಲ್ಲಿ ಶ್ರೀರಾಮನು ಅದ್ವಿತೀಯ ಹಡಗಿನಂತಿದ್ದಾನೆ.

ರಾಮ್ ನಾಮ್ ಸಬ್ ತೀರ್ಥ್ ಸ್ಥಾನ್
ರಾಮ್ ರಾಮ್ ಜಪ್ ಪರಮ್ ಸ್ನಾನ್
ಧೋ ಕರ್ ಪಾಪ್ ತಾಪ್ ಸಬ್ ಧೂಲ್
ಕರ್‌ದೇ ಭಯ್ ಭ್ರಮ್ ಕೊ ಉನ್ಮೂಲ್ ॥ 66 ॥

ಎಲ್ಲ ತೀರ್ಥಸ್ಥಾನಗಳೂ ರಾಮನಾಮದಲ್ಲಿಯೇ ಅಡಕವಾಗಿವೆ. ರಾಮನಾಮವು ಬಾಹ್ಯ ಹಾಗೂ ಆಂತರ್ಯವನ್ನು ಶುಚಿಗೊಳಿಸುವ ಅತ್ಯುತ್ತಮ ಸ್ನಾನವಾಗಿದೆ. ರಾಮನಾಮವು ಪಾಪ ಹಾಗೂ ಪಾಪದ ಧೂಳನ್ನು ತೊಳೆದು ಹಾಕಿ, ಭಯ ಸಂಶಯ ಭ್ರಾಂತಿಗಳನ್ನು ಬುಡ ಸಮೇತ ಕಿತ್ತು ಹಾಕಿ ಬಿಡುವುದು.

ರಾಮ್ ಜಾಪ್ ರವಿ ತೇಜ್ ಸಮಾನ್
ಮಹಾ ಮೋಹ್ ತಮ್ ಹರೆ ಅಜ್ಞಾನ್
ರಾಮ್ ಜಾಪ್ ದೆ ಆನಂದ್ ಮಹಾನ್
ಮಿಲೆ ಉಸೆ ಜಿಸೆ ದೆ ಭಗವಾನ್ ॥ 67 ॥

ಮೋಹ ಹಾಗೂ ಅಜ್ಞಾನದ ಘೋರ ಅಂಧಕಾರವನ್ನು ದೂರ ಮಾಡಿ ಬಿಡುವ ರಾಮನಾಮದ ಜಪ ಸೂರ್ಯನ ಪ್ರಕಾಶದಂತಿದೆ.

ವಾಸ್ತವದಲ್ಲಿ ರಾಮನಾಮವು ಅತ್ಯಧಿಕ ಆನಂದವನ್ನು ಪ್ರದಾನಮಾಡುವುದಾಗಿದೆ. ಆದರೆ ಇಂತಹ ಆನಂದವನ್ನು ಸ್ವಯಂ ಭಗವಂತನೇ ಯಾರಿಗೆ ನೀಡುವನೋ ಅಂಥವರಿಗೆ ಮಾತ್ರ ಅದು ಲಭ್ಯವಾಗುವುದು.

ರಾಮ್ ನಾಮ್ ಕೊ ಸಿಮರಿಯೆ
ರಾಮ್ ರಾಮ್ ಏಕ್ ತಾರ್
ಪರಮ್ ಪಾಠ್ ಪಾವನ್ ಪರಮ್
ಪತಿತ್ ಅಧಮ್ ದೆ ತಾರ್ ॥ 68 ॥

ಅನವರತ ಎಡೆಬಿಡದೆ ಅಖಂಡವಾಗಿ ರಾಮನಾಮದ ಜಪಮಾಡಿ, ರಾಮನಾಮವನ್ನು ಧ್ಯಾನಿಸಿ. ಇದು ಶ್ರೇಷ್ಠವಾದ ಪಾಠವಾಗಿದೆ, ಇದು ಅತ್ಯಂತ ಪುನೀತವಾಗಿದೆ. ಅತಿ ನೀಚನೇ ಇರಲಿ, ಪಾಪಿಯೇ ಆಗಿರಲಿ, ಅತಿ ದುಷ್ಟನೇ ಆಗಿರಲಿ, ರಾಮ ನಾಮವು ಅಂಥವರನ್ನೂ ಉದ್ಧಾರ ಮಾಡುವಂತದ್ದಾಗಿದೆ.

ಮಾಂಗೂ ಮೈ ರಾಮ್ ಕೃಪಾ ದಿನ್ ರಾತ್
ರಾಮ್ ಕೃಪಾ ಹರೆ ಸಬ್ ಉತ್ಪಾತ್
ರಾಮ್ ಕೃಪಾ ಲೇವೆ ಅಂತ್ ಸಂಭಾಲ್
ರಾಮ್ ಪ್ರಭು ಹೈ ಜನ್ ಪ್ರತಿಪಾಲ್ ॥ 69 ॥

ನಾನು ಹಗಲಿರುಳೂ ರಾಮಕೃಪೆಯನ್ನೇ ಬೇಡಿಕೊಳ್ಳುವೆನು. ಏಕೆಂದರೆ ರಾಮಕೃಪೆ ನಮ್ಮನ್ನು ಎಲ್ಲ ಅನರ್ಥಗಳಿಂದ ದುರ್ದೆಸೆಗಳಿಂದ, ಏರು ಪೇರುಗಳಿಂದ ಸಂರಕ್ಷಿಸುವಂತದ್ದಾಗಿದೆ. ಅಂತ್ಯಕಾಲದಲ್ಲೂ ರಾಮಕೃಪೆ ನಮ್ಮನ್ನು ರಕ್ಷಿಸುತ್ತದೆ. ಶ್ರೀ ರಾಮ ಪ್ರಭುವಂತೂ ಸಕಲರ ಪರಿಪಾಲಕನಾಗಿದ್ದು ರಕ್ಷಕನಂತಿದ್ದಾನೆ.

ರಾಮ್ ಕೃಪಾ ಹೈ ಉಚ್ಚತರ್ ಯೋಗ್
ರಾಮ್ ಕೃಪಾ ಹೈ ಶುಭ್ ಸಂಯೋಗ್
ರಾಮ್ ಕೃಪಾ ಸಬ್ ಸಾಧನ್ ಮರ್ಮ್
ರಾಮ್ ಕೃಪಾ ಸಂಯಮ್ ಸತ್ಯ ಧರ್ಮ್ ॥ 70 ॥

ರಾಮಕೃಪೆಯು ಸರ್ವೋಚ್ಚ ಯೋಗವಾಗಿದೆ. ರಾಮಕೃಪೆಯು ಪರಮ ಸೌಭಾಗ್ಯ, ಸದವಕಾಶ, ದೈವಯೋಗವಾಗಿದೆ. ರಾಮಕೃಪೆ ಎಲ್ಲ ಆಧ್ಯಾತ್ಮಿಕ ಸಾಧನೆ, ಅಭ್ಯಾಸಗಳಲ್ಲೂ ಅಡಕವಾಗಿರುವ ರಹಸ್ಯವಾಗಿದೆ, ಗೋಪನೀಯ ತತ್ವವಾಗಿದೆ. ವಾಸ್ತವದಲ್ಲಿ ರಾಮಕೃಪೆಯು ಮನಸ್ಸು ಹಾಗೂ ಇಂದ್ರಿಯಗಳ ನಿಗ್ರಹವಾಗಿದೆ, ಅದೇ ಸತ್ಯವಾದ ಧರ್ಮವೂ ಆಗಿದೆ.

ರಾಮ್ ನಾಮ್ ಕೊ ಮನ್ ಮೆ ಬಸಾನಾ
ಸುಪಥ್ ರಾಮ್ ಕೃಪಾ ಕಾ ಹೈ ಪಾನಾ
ಮನ್ ಮೆ ರಾಮ್ ಧುನ್ ಜಬ್ ಫಿರೆ
ರಾಮ್ ಕೃಪಾ ತಬ್ ಹೀ ಅವತರೆ ॥ 71 ॥

ಮನದೊಳಗೆ ರಾಮನಾಮವನ್ನು ಆಸೀನಗೊಳಿಸಿಕೊಳ್ಳುವುದು ರಾಮಕೃಪೆಯನ್ನು ಹೊಂದುವ ಸುಂದರ ಮಾರ್ಗವಾಗಿದೆ, ಸಾಧನವಾಗಿದೆ. ಮನದೊಳಗೆ ರಾಮನಾಮದ ಝೇಂಕಾರ ಏಳಲ್ಪಟ್ಟಾಗಲೇ ರಾಮಕೃಪೆ ಪ್ರಾಪ್ತವಾಗುವುದು.

ಧುನ್ : ತಾಳಸ್ವರ ಸಹಿತವಾಗಿ ರಾಮನಾಮದಲ್ಲೇ ಸಾಗುವುದು.

ರಹೂಂ ಮೈ ನಾಮ್ ಮೆ ಹೋ ಕರ್ ಲೀನ್
ಜೈಸೆ ಜಲ್ ಮೆ ಹೊ ಮೀನ್ ಅದೀನ್
ರಾಮ್ ಕೃಪಾ ಭರಪೂರ್ ಮೈ ಪಾವೂಂ
ಪರಮ್ ಪ್ರಭು ಕೊ ಭೀತರ್ ಲಾವೂಂ ॥ 72 ॥

ಮೀನು ನೀರಿನೊಳಗೆ ಯಾವ ರೀತಿ ನಿರ್ಭೀತಿಯಿಂದಿರುತ್ತದೋ ಅದೇ ರೀತಿ ನಾನೂ ಸಹ ರಾಮನಾಮದಲ್ಲಿ ಮಗ್ನನಾಗಿ ಬಯಸುತ್ತೇನೆ. ನಾನು ಸುಲಭವಾಗಿ ರಾಮಕೃಪೆಗೆ ಸಿಲುಕಿ, ನನ್ನ ಪ್ರಿಯ ಸ್ವಾಮಿಯನ್ನು ಅಂತರ್ಯದಲ್ಲಿ ಪ್ರಕಟಗೊಳಿಸಿಕೊಳ್ಳಬೇಕು. ಇದರರ್ಥ ರಾಮ ಹಾಗೂ ರಾಮನ ಕೃಪೆಯಲ್ಲಿ ಯಾವೊಂದು ಭಿನ್ನತೆಯೂ ಇಲ್ಲ.

ಭಕ್ತಿ ಭಾವ್‌ಸೆ ಭಕ್ತ್ ಸುಜಾನ್  
ಭಜ್‌ತೆ ರಾಮ್ ಕೃಪಾ ಕಾ ನಿಧಾನ್  
ರಾಮ್ ಕೃಪಾ ಉಸ್ ಜನ್ ಮೆ ಆವೆ  
ಜಿಸ್ ಮೆ ಆಪ್ ಹೀ ರಾಮ್ ಬಸಾವೆ ॥ 73 ॥

ಬುದ್ಧಿವಂತರು ಹಾಗೂ ಶ್ರದ್ಧಾವಂತರು ಕೃಪೆಯ ಭಂಡಾರವಾದ ರಾಮನನ್ನು ಭಕ್ತಿಭಾವದಿಂದ ಭಜಿಸುವರು. ಅಂತಹಾ ಭಕ್ತರಲ್ಲಿ ರಾಮಕೃಪೆಯು ಅವತರಿಸುವುದು. ಭಗವಂತನು ಅಂಥವರ ಮೇಲೆ ಸ್ವಯಂ ಕೃಪೆಯನ್ನು ಹರಿಸುವನು.

ಕೃಪಾ ಪ್ರಸಾದ್ ಹೈ ರಾಮ್ ಕೀ ದೇನೀ  
ಕಾಲ್ ವ್ಯಾಲ್ ಜಂಜಾಲ್ ಹರ್ ಲೇನೀ  
ಕೃಪಾ ಪ್ರಸಾದ್ ಸುಧಾ ಸುಖ್ ಸ್ವಾದ್  
ರಾಮ್ ನಾಮ್ ದೆ ರಹಿತ್ ವಿವಾದ್ ॥ 74 ॥

ಕೃಪಾರೂಪಿ ಪ್ರಸಾದವು ರಾಮನಿಂದ ಕೊಡಲ್ಪಡುವ ದಿವ್ಯ ಉಡುಗೊರೆಯಾಗಿದೆ. ಇದು ಕಾಲ ರೂಪಿ ಸರ್ಪನಾಗನಿಂದ ಆವೃತ್ತಗೊಂಡ ಕುಂಡಲಿಯಿಂದ, ವೇದನೆಗಳಿಂದ ಬಿಡುಗಡೆ ನೀಡುತ್ತದೆ. ರಾಮನಾಮ ಕೃಪಾರೂಪಿ; ಪ್ರಸಾದದ ಮೂಲಕ ನಿಸ್ಸಂದೇಹವಾಗಿಯೂ ಅಮೃತ ಸುಖದ ರುಚಿ ಸಿಗುವುದು. ಇದರ ಬಗ್ಗೆ ವಾದ ವಿವಾದಗಳೇ ಬೇಕಿಲ್ಲ.

**ಪ್ರಭು ಪ್ರಸಾದ್ ಶಿವ್ ಶಾಂತಿ ದಾತಾ**
**ಬ್ರಹ್ಮ್ ಧಾಮ್ ಮೆ ಆಪ್ ಪಹುಂಚಾತಾ**
**ಪ್ರಭು ಪ್ರಸಾದ್ ಪಾವೆ ವಹ್ ಪ್ರಾಣಿ**
**ರಾಮ್ ರಾಮ್ ಜಪೇ ಅಮೃತ್ ವಾಣಿ ॥ 75 ॥**

ಪ್ರಭು ಶ್ರೀರಾಮ ಶಾಂತಿ, ಪ್ರಸನ್ನತೆ ಹಾಗೂ ಮಂಗಳವನ್ನುಂಟು ಮಾಡುವವನಾಗಿದ್ದಾನೆ. ಇದೇ ಪ್ರಭುವಿನಿಂದ ದಯಪಾಲಿಸಲ್ಪಟ್ಟ ಪ್ರಸಾದವಾಗಿದೆ. ಪ್ರಭುವಿನ ಪ್ರಸಾದವು ನಮ್ಮನ್ನು ತನ್ನಷ್ಟಕ್ಕೆ ತಾನೇ ಬ್ರಹ್ಮಧಾಮಕ್ಕೆ ಕೊಂಡೊಯ್ಯುವಂತದ್ದಾಗಿದೆ. ನಿರಂತರವಾಗಿ ರಾಮ ನಾಮದ ಸ್ಮರಣೆ, ಧ್ಯಾನ, ಜಪವನ್ನು, ಯಾರು ಮಾಡುವರೋ; ಅಂಥವರಿಗಷ್ಟೆ, ಪ್ರಭುವಿನ ಪ್ರಸಾದ ಲಭ್ಯ.

**ಔಷಧ್ ರಾಮ್ ನಾಮ್ ಕಿ ಖಾಯಿಯೆ**
**ಮೃತ್ಯು ಜನ್ಮ್ ಕೆ ರೋಗ್ ಮಿಟಾಯಿಯೆ**
**ರಾಮ್ ನಾಮ್ ಅಮೃತ್ ರಸ್ ಪಾನ್**
**ದೇತಾ ಅಮಲ್ ಅಚಲ್ ನಿರ್ವಾಣ್ ॥ 76 ॥**

ರಾಮನಾಮವೆಂಬ ದಿವ್ಯೌಷಧಿಯ ಸೇವನೆಯನ್ನು ಮಾಡಿ ಜನನ ಮರಣವೆಂಬ ರೋಗದಿಂದ ಮುಕ್ತರಾಗಿರಿ. ರೋಗವನ್ನು ನಾಶಗೊಳಿಸಿರಿ. ರಾಮನಾಮರೂಪಿ ಅಮೃತದ ಸೇವನೆಯು ಶುದ್ಧ, ಸುಸ್ಪಷ್ಟ ಹಾಗೂ ಸ್ಥಿರ ಮೋಕ್ಷವನ್ನು ನೀಡುವಂತದ್ದಾಗಿದೆ.

**ರಾಮ್ ರಾಮ್ ಧುನ್ ಗೂಂಜ್ ಸೆ**
**ಭವ್ ಭಯ್ ಜಾತೆ ಭಾಗ್**
**ರಾಮ್ ನಾಮ್ ಧುನ್ ಧ್ಯಾನ್ ಸೆ**
**ಸಬ್ ಶುಭ್ ಜಾತೆ ಜಾಗ್ ॥ 77 ॥**

ರಾಮನಾಮದ ಧ್ವನಿಯ ಪ್ರತಿಧ್ವನಿಯಿಂದ ಜನನ ಮರಣದ ಭಯ ದೂರವಾಗುವುದು. ರಾಮನಾಮದ ಮೇಲೆ ಏಕಾಗ್ರತೆಯನ್ನು ಹೊಂದುವುದರಿಂದ, ಅದನ್ನೇ ಧ್ಯಾನಿಸುವುದರಿಂದ ಎಲ್ಲ ಒಳಿತೂ ಪ್ರಕಟಗೊಳ್ಳುವುದು, ಜೊತೆಗೆ ಸೌಭಾಗ್ಯವೂ ಉದಿತವಾಗುವುದು.

ಮಾಂಗೂಂ ಮೈ ರಾಮ್ ನಾಮ್ ಮಹಾದಾನ್
ಕರತಾ ನಿರ್ಧನ್ ಕಾ ಕಲ್ಯಾಣ್
ದೇವ್ ದ್ವಾರ್ ಪರ್ ಜನ್ಮ್ ಕಾ ಭೂಖಾ
ಭಕ್ತಿ ಪ್ರೇಮ್ ಅನುರಾಗ್ ಸೆ ರುಖಾ ॥ 78 ॥

ನಾನು ರಾಮನಾಮದ ದಿವ್ಯ ದಾನವನ್ನು ಬೇಡಿಕೊಳ್ಳುವೆನು. ಪ್ರಭು ಶ್ರೀರಾಮನಿಂದ ಆತನ ಶ್ರೇಷ್ಠವಾದ, ಮಹತ್ತರವಾದ, ಮಧುರವಾದ ನಾಮವನ್ನು ದಾನವಾಗಿ ಬೇಡುವೆನು. ರಾಮನಾಮವು ನಿರ್ಧನರ, ನಿರ್ಬಲರ, ದರಿದ್ರರ ಉದ್ಧಾರ ಕಲ್ಯಾಣ ಮಾಡುವುದಾಗಿದೆ. ಜನ್ಮಜನ್ಮಾಂತರದಿಂದಲೂ ನಾನು ಕಂಗಾಲಾಗಿ ರಾಮನ ದ್ವಾರದ ಮುಂದೆ ಭಿಕ್ಷೆಗಾಗಿ ನಿಂತಿದ್ದೇನೆ. ನನ್ನಲ್ಲಿ ಭಕ್ತಿ ಶ್ರದ್ಧೆ ಪ್ರೇಮ ಅನುರಾಗ ಇದ್ಯಾವುದೂ ಇಲ್ಲ.

ಪರ್ ಹೂಂ ತೇರ್ ಯಹ್ ಲಿಯ ಟೇರ್
ಚರಣ್ ಪಡೆ ಕೀ ರಖಿಯೊ ಮೇರ್
ಅಪನಾ ಆಪ್ ವಿರದ್ ವಿಚಾರ್
ದೀಜಿಯೇ ಭಗವಾನ್! ನಾಮ್ ಪ್ಯಾರ್ ॥ 79 ॥

ಪ್ರಭುರಾಮನಲ್ಲಿ ನಾನು ಬೇಡಿಕೊಳ್ಳುವುದೇನೆಂದರೆ ನಾನು ನಿನ್ನವನು, ನಿನ್ನ ಚರಣಗಳ ಮೇಲೆ ಬಿದ್ದಿರುವ ನನ್ನ ಮೇಲೆ ದಯೆ ತೋರು, ಕೃಪೆ ತೋರು. ಹೇ ಪ್ರಭು, ನನ್ನ ದೋಷಗಳ ಕಡೆ ಗಮನವೀಯದೆ

ತಮ್ಮ ಸಾಮರ್ಥ್ಯ ಸ್ವಭಾವ ಶ್ರೇಷ್ಠತೆಗಳ ಯಶೋಗಾನದ ಬಗ್ಗೆ ತಿಳಿಸುವ ತಮ್ಮ ನಾಮದ ಬಗೆಗೆ ನನ್ನಲ್ಲಿ ಪ್ರೀತಿಯುಂಟಾಗುವಂತೆ ಮಾಡಿರಿ.

**ರಾಮ್ ನಾಮ್ ನೆ ವೆ ಬೀ ತಾರೆ**
**ಜೊ ಥೆ ಅಧರ್ಮೀ ಅಧಮ್ ಹತ್ಯಾರೆ**
**ಕಪಟಿ ಕುಟಿಲ್ ಕುಕರ್ಮಿ ಅನೇಕ್**
**ತರ್ ಗಯೆ ರಾಮ್ ನಾಮ್ ಲೆ ಏಕ್ ॥ 80 ॥**

ಯಾರೆಲ್ಲ ಧರ್ಮಹೀನರಾಗಿದ್ದರೋ, ನಾಸ್ತಿಕರಾಗಿದ್ದರೋ, ನೀಚರಾಗಿದ್ದರೋ, ಹಂತಕರಾಗಿದ್ದರೋ, ಕಪಟಿಗಳಾಗಿದ್ದರೋ, ಅಸಹ್ಯ ಅಶ್ಲೀಲ ಕೆಲಸಗಳಲ್ಲಿ ನಿರತರಾಗಿದ್ದರೋ, ಕುಕರ್ಮಿಗಳಾಗಿದ್ದರೋ, ಪಾಪಿಗಳೆಂದೆನಿಸಿದ್ದರೋ ಅಂಥವರನ್ನೆಲ್ಲರನ್ನೂ ರಾಮನಾಮ ಉದ್ಧಾರಮಾಡಿ ಅವರೆಲ್ಲರೂ ರಾಮನಾಮವನ್ನು ಪಡೆದು ಪಾರಾಗಿಬಿಟ್ಟಿದ್ದಾರೆ.

**ತರ್ ಗಯೆ ಧೃತಿ ಧಾರಣಾ ಹೀನ್**
**ಧರ್ಮ್ ಕರ್ಮ್ ಮೆ ಜನ್ ಅತಿ ದೀನ್**
**ರಾಮ್ ರಾಮ್ ಶ್ರೀ ರಾಮ್ ಜಪ್ ಜಾಪ್**
**ಹುಯೆ ಅತುಲ್ ವಿಮಲ್ ಅಪಾಪ್ ॥ 81 ॥**

ಯಾರೆಲ್ಲ ಅನಿಶ್ಚಿತರಾಗಿ, ಅವಿಶ್ವಾಸಿಗಳಾಗಿದ್ದರೋ, ಸಹನೆ ಇಲ್ಲದವರಾಗಿದ್ದರೋ, ಯಾರ ಮನಸ್ಸು ಅಸ್ಥಿರವಾಗಿದ್ದು ಭಗವಂತನ ಮೇಲೆ ನೆಲೆಸುತ್ತಿರಲಿಲ್ಲವೋ, ಅನೈತಿಕ ಕರ್ಮಗಳಲ್ಲಿ ತೊಡಗಿದ್ದರೋ, ಅಂತಹ ಧರ್ಮಹೀನ, ಕರ್ಮಹೀನ, ತುಚ್ಛ ಕರ್ಮಿಗಳೂ ಕೂಡಾ ಶ್ರೀರಾಮನ ಪವಿತ್ರವಾದ ಸ್ಮರಣೆ ಧ್ಯಾನಗಳಿಂದ ನಿಷ್ಪಾಪಿಗಳಾಗಿ, ತಮ್ಮೆಲ್ಲ ಪಾಪಗಳಿಂದ ಮುಕ್ತರಾಗಿರುವರು. ಅವರ ಪಾವಿತ್ರ್ಯತೆಗೆ ಹೋಲಿಕೆ ನೀಡಲು ಸಾಧ್ಯವಾಗದ ಮಟ್ಟಿಗೆ ಅವರೆಲ್ಲರೂ ನಿರ್ಮಲರಾಗಿ ಪಾಪರಹಿತರಾಗಿ ಬಿಡುವರು.

ಧೃತಿ : ಧೈರ್ಯ, ದೃಢ ನಿಶ್ಚಯ, ದೃಢಸಂಕಲ್ಪ (Steadiness).

ರಾಮ್ ನಾಮ್ ಮನ್ ಮುಖ್ ಮೆ ಭೋಲೆ
ರಾಮ್ ನಾಮ್ ಭೀತರ್ ಪಟ್ ಖೋಲೆ
ರಾಮ್ ನಾಮ್ ಸೆ ಕಮಲ್ ವಿಕಾಸ್
ಹೋವೆಂ ಸಬ್ ಸಾಧನ್ ಸುಖ್ ರಾಸ್ ॥ 82 ॥

ರಾಮನಾಮವನ್ನು ಬಾಯಿಂದ ಹಾಗೂ ಮನಸ್ಸಿನಿಂದ ಧ್ಯಾನಿಸುವುದರಿಂದ ಅಂತರ್ಯದ ಬಾಗಿಲು ತೆರೆದುಕೊಳ್ಳುವುದು, ಅಜ್ಞಾನದ ಪಟ ಸರಿದು ಹರಿದುಹೋಗುವುದು. ರಾಮನಾಮವನ್ನು ಜಪಿಸುವುದರಿಂದ ಹೃದಯ ಕಮಲವರಳಿ ವಿಕಸಿತಗೊಳ್ಳುವುದು. ಅದರಿಂದ ನಮ್ಮ ಸಾಧನೆಯು, ಆನಂದದಾಯಕವೂ ಸುಖಮಯವೂ ಆಗಿ ಸಫಲಗೊಳ್ಳುವುದು.

ರಾಮ್ ನಾಮ್ ಘಟ್ ಭೀತರ್ ಬಸೇ
ಸಾಂಸ್ ಸಾಂಸ್ ನಸ್ ನಸ್ ಸೇ ರಸೇ
ಸಪ್‌ನೆ ಮೆ ಭೀ ನ ಬಿಸರೆ ನಾಮ್
ರಾಮ್ ರಾಮ್ ಶ್ರೀ ರಾಮ್ ರಾಮ್ ರಾಮ್ ॥ 83 ॥

ತನುಮನಗಳಲ್ಲಿ ರಾಮನಾಮವು ನೆಲೆಸಿದಾಗ ಶ್ವಾಸೋಚ್ಛ್ವಾಸ ನರ ನಾಡಿಗಳಿಂದ ರಾಮನಾಮವು ಹರಿಯಲಾರಂಭಿಸುವುದು. ರಾಮ ನಾಮವು ಅಂತರ್ಯದಲ್ಲಿ ಪ್ರತಿಯೊಂದು ರೋಮ, ಅಂಗ ಹಾಗೂ ಕೋಶ ಗಳಲ್ಲಿ ಬೆರೆತು, ಪರ್ವತ ಪ್ರದೇಶಗಳಿಂದ ನೀರಿನ ಝರಿಗಳು ಹರಿಯುವಂತೆ ಹರಿಯಲಾರಂಭಿಸುವುದು. ಆಗ ಸ್ವಪ್ನದಲ್ಲಿಯೂ ಕೂಡಾ ರಾಮ ನಾಮದ ವಿಸ್ಮರಣೆಯಾಗದು. ರಾಮನಾಮದ ನಿತ್ಯಸ್ಮರಣೆ ಸದಾ ನೆನಪಿನಲ್ಲಿರುವುದು. ದಿನನಿತ್ಯ ನಾಮಸ್ಮರಣೆಯ ಜಪ ಸಾಗುವುದು.

ರಾಮ್ ನಾಮ್ ಕೆ ಮೇಲ್ ಸೆ
ಸಧ್ ಜಾತೆ ಸಬ್ ಕಾಮ್
ದೇವ್ ದೇವ್ ದೇವೇ ಯದಾ
ದಾನ್ ಮಹಾ ಸುಖ್ ಧಾಮ್ ॥ 84 ॥

ರಾಮನಾಮದ ಸಂಯೋಗದಿಂದ ಎಲ್ಲಾ ಕಾರ್ಯಗಳೂ ಫಲಿಸುವುವು, ಸಿದ್ಧಿಸುವುವು. ಆ ವ್ಯಕ್ತಿ ಧನ್ಯನಾಗುವನು, ಕೃತಕೃತ್ಯನಾಗುವನು. ದೇವರ ದೇವ ಶ್ರೀರಾಮ ಪ್ರಭು ಅನುಗ್ರಹಿಸಿದಾಗ, ಸುಖವು ಮಹಾದಾನದ ರೂಪದಲ್ಲಿ ಲಭ್ಯವಾಗುವುದು.

ಅಹೋ ! ಮೈ ರಾಮ್ ನಾಮ್ ಧನ್ ಪಾಯಾ
ಕಾನ್ ಮೆ ರಾಮ್ ನಾಮ್ ಜಬ್ ಆಯಾ
ಮುಖ್ ಸೆ ರಾಮ್ ನಾಮ್ ಜಬ್ ಗಾಯಾ
ಮನ್ ಸೆ ರಾಮ್ ನಾಮ್ ಜಬ್ ಧ್ಯಾಯಾ ॥ 85 ॥

ರಾಮನಾಮವು ನನ್ನ ಕಿವಿಗಳನ್ನು ಪ್ರವೇಶಿಸಿದಾಗಿನಿಂದಲೂ ಬಾಯಿಂದ ನಾನು ರಾಮನಾಮವನ್ನು ಜಪಿಸಲಾರಂಭಿಸಿದಾಗಿನಿಂದಲೂ, ರಾಮನಾಮದ ಮೇಲೆ ನನ್ನ ಮನಸ್ಸು ಏಕಾಗ್ರಗೊಂಡಾಗಿನಿಂದಲೂ ನಾನು ರಾಮರೂಪಿ ಧನವನ್ನು ಗಳಿಸಿಕೊಂಡಿದ್ದೇನೆ. ನಾನು ಧನ್ಯನೆಂಬ ಭಾವನೆ ನನಗನಿಸತೊಡಗಿದೆ.

ಪಾಕರ್ ರಾಮ್ ನಾಮ್ ಧನ್ ರಾಶೀ
ಘೋರ್ ಅವಿದ್ಯಾ ವಿಪದ್ ವಿನಾಶೀ
ಬಢಾ ಜಬ್ ರಾಮ್ ಪ್ರೇಮ್ ಕಾ ಪೂರ್
ಸಂಕಟ್ ಸಂಶಯ್ ಹೋ ಗಯೆ ದೂರ್ ॥ 86 ॥

ರಾಮನಾಮದ ಸಂಪತ್ತು ಲಭಿಸಿದಾಗಿನಿಂದ ಗಾಢ ಅಜ್ಞಾನದ ಫಲವಾಗಿ ಹುಟ್ಟಿಕೊಂಡಂತಹ ತೀವ್ರವಾದ ದುಃಖಗಳೆಲ್ಲ ನಾಶವಾಗಿವೆ. ಅಂದರೆ ರಾಮನಾಮದ ಸಂಪತ್ತನ್ನು ಗಳಿಸಿಕೊಂಡರೆ, ಅಜ್ಞಾನ ಹಾಗೂ ದುಃಖಗಳೆರಡೂ ನಾಶವಾಗಿ ಬಿಡುವುವು. ರಾಮನ ಬಗ್ಗೆ ಅನುರಾಗ ಮೂಡಿದಾಗಿನಿಂದ ಸಕಲ ಸಂಕಟಗಳು, ಸಂಶಯಗಳು ನಿವಾರಣೆಯಾಗುವುವು. ಹೃದಯದೊಳಗೆ ಭಗವದ್ ಪ್ರೇಮದ ಅಲೆಗಳೆದ್ದಾಗ ಅವು ತನ್ನೊಂದಿಗೆ ಭ್ರಮೆ ಸಂಕಟಗಳನ್ನು ಕೊಚ್ಚಿಕೊಂಡೊಯ್ದು ಬಿಡುವುದು. ಅವಿದ್ಯೆಯ ಅಂಧಕಾರವನ್ನು ನಿವಾರಿಸಲು, ವಿಪತ್ತುಗಳನ್ನು ನಾಶಮಾಡಲು ರಾಮನಾಮವೊಂದೇ ದಿವ್ಯ ಮಂತ್ರವಾಗಿದೆ.

**ರಾಮ್ ನಾಮ್ ಜೊ ಜಪೆ ಏಕ್ ಬೇರ್**
**ಉಸ್ ಕೆ ಭೀತರ್ ಕೋಸ್ ಕುಬೇರ್**
**ದೀನ್ ದುಖಿಯಾ ದರಿದ್ರ್ ಕಂಗಾಲ್**
**ರಾಮ್ ರಾಮ್ ಜಪ್ ಹೋವೆ ನಿಹಾಲ್ ॥ 87 ॥**

ಯಾರೇ ಆಗಲಿ ಒಂದೇ ಒಂದು ಸಲ ರಾಮನಾಮವನ್ನು ಭಜಿಸಿದ್ದೇ ಆದರೂ, ಅವರಲ್ಲಿ ರಾಮನಾಮದ ಸಂಪತ್ತು ಸಂಚಿತವಾಗಿ ಬಿಡುವುದು. ದೇವತೆಗಳ ಕೋಶಾಧ್ಯಕ್ಷನಾದ ಕುಬೇರನ ಸಂಪತ್ತಿಗೆ ಸಮನಾದ ಸಂಪತ್ತನ್ನು ಗಳಿಸುವರು. ರಾಮನಾಮದ ಜಪದಿಂದ ದಯನೀಯ ಸ್ಥಿತಿಯಲ್ಲಿರುವವರು, ನಿರ್ಧನರು, ಬಲಹೀನರು, ದುಃಖ ದರಿದ್ರರು ಕೂಡಾ ನಿರಾಳವಾಗುವರು. ಸೌಭಾಗ್ಯ ಸಂಪತ್ತನ್ನು ಗಳಿಸುವರು.

ಹೃದಯ್ ರಾಮ್ ನಾಮ್ ಸೆ ಭರಿಯೆ
ಸಂಚಯ್ ರಾಮ್ ನಾಮ್ ಧನ್ ಕರಿಯೆ
ಘಟ್ ಮೆ ನಾಮ್ ಮೂರ್ತಿ ಧರಿಯೇ
ಪೂಜಾ ಅಂತರ್ಮುಖ್ ಹೋ ಕರಿಯೇ ॥ 88 ॥

ಆದ್ದರಿಂದ ನಿಮ್ಮ ಹೃದಯವನ್ನು ರಾಮನಾಮದಿಂದ ತುಂಬಿಸಿಕೊಂಡು ರಾಮನಾಮರೂಪಿ ಧನವನ್ನು ಶೇಖರಿಸಿಟ್ಟುಕೊಳ್ಳಿ. ಈ ಸತ್ಯವಾದ ದಾನವನ್ನು ಸಂಗ್ರಹಿಸಿ, ನಿಮ್ಮ ಅಂತರ್ಯದಲ್ಲಿ ರಾಮನಾಮರೂಪಿ ಮೂರ್ತಿಯನ್ನು ಸ್ಥಾಪಿಸಿಕೊಳ್ಳಿ. ಅಂತರ್ಮುಖಿಗಳಾಗಿ ಪೂಜಿಸಲಾರಂಭಿಸಿ, ಅಂತರ್ಯದೊಳಗೆ ಆಸೀನನಾದ ಪ್ರಭುರಾಮನ ಉಪಾಸನೆ ಮಾಡಿರಿ.

ಆಂಖೆಂ ಮೂಂದ್‌ಕೆ ಸುನಿಯೆ ಸಿತಾರ್
ರಾಮ್ ರಾಮ್ ಸುಮಧುರ್ ಝಂಕಾರ್
ಉಸ್‌ಮೇ ಮನ್ ಕಾ ಮೇಲ್ ಮಿಲಾವೊ
ರಾಮ್ ರಾಮ್ ಸುರ್ ಮೆ ಹೀ ಸಮಾವೋ ॥ 89 ॥

ಕಣ್ಣುಗಳನ್ನು ಮುಚ್ಚಿಕೊಂಡು, ಅಂತರ್ಯದೊಳಗೆ, ಮಿಡಿಯುವ ರಾಮನಾಮದ ಸಿತಾರದ ಮಧುರ ಝೇಂಕಾರವನ್ನು ಆಲಿಸಿ, ಅದರೊಳಗೇ ಮನಸ್ಸನ್ನು ನೆಲೆಸಿಕೊಳ್ಳಿ. ಈ ರೀತಿಯಾಗಿ ರಾಮನಾಮದ ಝೇಂಕಾರದಲ್ಲಿ ರಾಗದ ಲಯದೊಂದಿಗೆ ಲೀನರಾಗಿರಿ.

ಜಪೂಂ ಮ್ಯೆ ರಾಮ್ ರಾಮ್ ಪ್ರಭು ರಾಮ್
ಧ್ಯಾವೂಂ ಮ್ಯೆ ರಾಮ್ ರಾಮ್ ಹರೇ ರಾಮ್
ಸಿಮರೂಂ ಮ್ಯೆ ರಾಮ್ ರಾಮ್ ಪ್ರಭು ರಾಮ್
ಗಾವೂಂ ಮ್ಯೆ ರಾಮ್ ರಾಮ್ ಶ್ರೀ ರಾಮ್ ॥ 90 ॥

ಹೇ ರಾಮ! ಸದಾ ನಾನು ರಾಮನಾಮವನ್ನೇ ಜಪಿಸುವಂತಾಗಲಿ. ಹೇ ಪ್ರಭು! ಸದೈವ. ನನ್ನ ಮನಸ್ಸು ರಾಮನಾಮವನ್ನೇ ಧ್ಯಾನಿಸುತ್ತಿರಲಿ. ಸದಾಕಾಲವೂ ನಾನು ರಾಮನಾಮವನ್ನೇ ಸ್ಮರಿಸುವಂತಾಗಲಿ. ಸದಾ ಕಾಲವೂ ನಾನು ರಾಮ ರಾಮ ಶ್ರೀ ರಾಮವೆಂದು ಹಾಡುವಂತಾಗಲಿ.

ಅಮೃತವಾಣಿ ಕಾ ನಿತ್ಯ ಗಾನಾ
ರಾಮ್ ರಾಮ್ ಮನ್ ಬೀಚ್ ರಮಾನಾ
ದೇತಾ ಸಂಕಟ್ ವಿಪದ್ ನಿವಾರ್
ಕರತಾ ಶುಭ್ ಶ್ರೀ ಮಂಗಲಾಚಾರ್ ॥ 91 ॥

ಅಮರತ್ವವನ್ನೊದಗಿಸುವ ಈ ದಿವ್ಯಮಂತ್ರವನ್ನು ಪ್ರತಿನಿತ್ಯ ಕೀರ್ತನೆ ಸಂಕೀರ್ತನೆ ಮಾಡುವುದರಿಂದ ನಮ್ಮ ಮನಮಂದಿರದೊಳಗೆ ರಾಮ ನಾಮವನ್ನು ಪ್ರತಿಷ್ಠಾಪಿತಗೊಳಿಸಬಹುದು. ದಿನನಿತ್ಯ ರಾಮನಾಮ ವನ್ನು ಪಠಿಸುವುದರಿಂದ ದುಃಖ ವಿಪತ್ತುಗಳು ತಡೆಯಲ್ಪಟ್ಟು ನಿವಾರಣೆ ಯಾಗುವುವು. ಸಕಲೈಶ್ವರ್ಯ, ಸುಖ ಸೌಭಾಗ್ಯಗಳೂ ಲಭಿಸುವುವು. ರಾಮ ನಾಮ ಮಂಗಳಕಾರಕ ಸುಖದಾಯಕವಾಗಿದ್ದು ಶುಭಾರಂಭವಾಗಿದೆ.

ರಾಮ್ ನಾಮ್ ಜಪ್ ಪಾಠ್ ಸೆ
ಹೋ ಅಮೃತ್ ಸಂಚಾರ್
ರಾಮ್ ಧಾಮ್ ಮೆ ಪ್ರೀತಿ ಹೋ
ಸುಗುಣ್ ಗಣ್ ಕಾ ವಿಸ್ತಾರ್ ॥ 92 ॥

ರಾಮನಾಮದ ಜಪ ಹಾಗೂ ಸಂಕೀರ್ತನ ಗುಣಗಾನಗಳಿಂದ ಅಮೃತ ಸಂಚಾರವಾಗುವುದು. ಅರ್ಥಾತ್ ಅದು ಮಧುರತೆಯನ್ನು

ಉಚಿತಗೊಳಿಸಿ ವ್ಯಾಪಿಸುವಂತೆ ಮಾಡುವುದು. ಇದರಿಂದ ರಾಮ ಹಾಗೂ ಅವನ ನಿವಾಸಸ್ಥಾನದ ಬಗೆಗೆ ಪ್ರೇಮವುಂಟಾಗುವುದು ಹಾಗೂ ಸದ್ಗುಣಗಳ ಸಮೂಹದ ವಿಸ್ತಾರವಾಗುವುದು. ಒಳ್ಳೆ ಗುಣಗಳ ವೃದ್ಧಿಯಾಗುವುದು.

**ತಾರಕ್ ಮಂತ್ರ್ ರಾಮ್ ಹೈ**
**ಜಿಸ್ ಕೀ ಸುಫಲ್ ಅಪಾರ್**
**ಇಸ್ ಮಂತ್ರ್ ಕೆ ಜಾಪ್ ಸೆ**
**ನಿಶ್ಚಯ್ ಬನೆ ನಿಸ್ತಾರ್ ॥ 93 ॥**

ರಾಮನಾಮ ತಾರಕ ಮಂತ್ರವಾಗಿದೆ, ಉದ್ಧಾರ ಮಾಡುವುದಾಗಿದೆ, ವಿಮೋಚನೆಯನ್ನು ತಂದುಕೊಡುವಂತದ್ದಾಗಿದೆ. ಅದು ಅಸಂಖ್ಯಾ ಲಾಭ, ಸುಖ ಭೋಗ, ಸಫಲತೆ ಸಿದ್ಧಿಗಳನ್ನು ಪ್ರದಾನ ಮಾಡಿ ಆನಂದದ ಅನುಭವವನ್ನು ಉಂಟುಮಾಡುವುದಾಗಿದೆ. ಈ ಮಂತ್ರವನ್ನು ಜಪಿಸುವುದರಿಂದ ಮುಕ್ತಿ ಪ್ರಾಪ್ತಿ ನಿರ್ವಾಣ, ರಾಮಧಾಮದ ಪ್ರಾಪ್ತಿ ಭಗವದ್ ಸಾಕ್ಷಾತ್ಕಾರ, ಪರಮಪದದ ಪ್ರಾಪ್ತಿ, ಆತ್ಮ ಪರಮಾತ್ಮರ ಮಿಲನ, ಐಕ್ಯತೆ ಏಕರೂಪತೆ ಪ್ರಾಪ್ತಿಯಾಗೇಯಾಗುತ್ತದೆ ಎಂಬ ದೃಢ ಸಂಕಲ್ಪವನ್ನು ಮಾಡಿಕೊಳ್ಳಿ.

## ಧುನ್

1. ಬೋಲೋ ರಾಮ್, ಬೋಲೋ ರಾಮ್, ಬೋಲೋ ರಾಮ್,
ರಾಮ್ ರಾಮ್.

2. ಶ್ರೀ ರಾಮ್ ಶ್ರೀ ರಾಮ್ ಶ್ರೀ ರಾಮ್ ರಾಮ್ ರಾಮ್.

3. ಜಯ್ ಜಯ್ ರಾಮ್, ಜಯ್ ಜಯ್ ರಾಮ್
ಜಯ್ ಜಯ್ ರಾಮ್ ರಾಮ್.

4. ಜಯ್ ರಾಮ್ ಜಯ್ ರಾಮ್ ಜಯ್ ಜಯ್ ರಾಮ್
ರಾಮ್ ರಾಮ್ ರಾಮ್ ರಾಮ್ ಜಯ್ ಜಯ್ ರಾಮ್.

5. ಪತಿತ್ ಪಾವನ್ ನಾಮ್ ಭಜ್‌ಲೆ ರಾಮ್ ರಾಮ್ ರಾಮ್
ಭಜ್ ರಾಮ್ ರಾಮ್ ರಾಮ್
ಭಜ್‌ಲೆ ರಾಮ್ ರಾಮ್ ರಾಮ್.

6. ಅಶರಣ್ ಶರಣ್ ಶಾಂತಿ ಕೆ ಧಾಮ್
ಮುಝೆ ಭರೋಸಾ ತೇರಾ ರಾಮ್
ಮುಝೆ ಭರೋಸಾ ತೇರಾ ರಾಮ್
ಮುಝೆ ಭರೋಸಾ ತೇರಾ ರಾಮ್

7. ರಾಮಾಯ ನಮಃ ಶ್ರೀ ರಾಮಾಯ ನಮಃ
ರಾಮಾಯ ನಮಃ ಶ್ರೀ ರಾಮಾಯ ನಮಃ

8. ಅಹಂ ಭಜಾಮಿ ರಾಮಂ, ಸತ್ಯಂ ಶಿವಂ, ಮಂಗಲಂ
ಸತ್ಯಂ ಶಿವಂ, ಮಂಗಲಂ, ಸತ್ಯಂ, ಶಿವಂ, ಮಂಗಲಂ.

ವೃದ್ಧಿ ಆಸ್ತಿಕ್ ಭಾವ್‌ಕೀ,
ಶುಭ್ ಮಂಗಲ್ ಸಂಚಾರ್
ಅಭ್ಯುದಯ್ ಸದ್ಧರ್ಮ್ ಕಾ,
ರಾಮ್ ನಾಮ್ ವಿಸ್ತಾರ್.

## ಪರಮೇಶ್ವರ ಶ್ರೀ ರಾಮನಲ್ಲಿ ನಿಷ್ಕಾಮ ಪ್ರಾರ್ಥನೆ

ವಿಶ್ವದಲ್ಲಿ ಈಶ್ವರನ ಪ್ರತಿ ಆಸ್ಥೆ ಏವಂ
ಈಶ್ವರಿಯ ಜ್ಞಾನದ ಪ್ರತಿ ಶ್ರದ್ಧೆ ವಿಶ್ವಾಸ ಹೆಚ್ಚಲಿ.
ವಿಶ್ವದಲ್ಲೆಲ್ಲ ಶುಭ ಏವಂ ಮಂಗಳ ವ್ಯಾಪಿಸಲಿ,
ಸತ್ಯವಾದ ಧರ್ಮದ ಉದಯವಾಗಲಿ,
ತಥಾ ರಾಮ ನಾಮ ಹರಡಲಿ.